ಶಿವಾನುಭವ ಗ್ರಂಥಮಾಲಾ ನಂ॥ ೫೯

# ಕೆಳದಿ ಸಂಸ್ಥಾನದ

# ರಾಯರ ವಂಶಾವಳಿ.

ಸಂಪಾದಕರು :

ರಾ. ಬ. ಪಿ. ಜಿ. ಹಳಕಟ್ಟಿ, ಬಿ. ಎ., ಎಲ್. ಎಲ್. ಬಿ.

ವಿಜಾಪುರ.

---

೧೯೪೩

( ಇದರ ಯಾವತ್ತು ಅಧಿಕಾರವು ಕಾದಿಡಲ್ಪಟ್ಟಿದೆ. )

ಬೆಲೆ ರೂ॥ ೦—೨—೬

SHPI

136

ಇದನ್ನು ವಿಜಾಪುರದಲ್ಲಿ
ರಾ. ಬ. ಪಿ. ಜಿ. ಹಳಕಟ್ಟಿ ಬಿ. ಎ., ಎಲ್. ಎಲ್. ಬಿ. ಇವರು
ತಮ್ಮ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ೧೬೭೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.

# ಪ್ರಸ್ತಾವನೆ.

ಈಗ ನಾವು ಪ್ರಕಟಿಸಿದ ಗ್ರಂಥದ ಮೂಲ ಹಸ್ತಲಿಖಿತ ಪ್ರತಿಯನ್ನು ದಿವಂಗತ ಬಿ. ರಾಮರಾಯರು ಎಂ. ಎ. ಎಲ್. ಎಲ್. ಬಿ. ರಿಟಾಯರ್ಡ ಸೀನಿಯರ್ ಟ್ರಾನ್ಸಲೇಟರ ಮದ್ರಾಸ ಗವ್ಹರ್ನಮೆಂಟ ಇವರು ದೊರಕಿಸಿದ್ದರು. ಅವರು ಅದರ ಕೆಲಭಾಗವನ್ನು ಬರೆದು ನಮ್ಮ ಕಡೆಗೆ ಶಿವಾನುಭವ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೋಸ್ಕರ ಕಳಿಸಿಕೊಟ್ಟರು. ಅಷ್ಟು ಭಾಗವು ಮಾತ್ರ ಈ ಗ್ರಂಥದಲ್ಲಿ ಈಗ ಪ್ರಕಟವಾಗಿದೆ. ಮುಂದೆ ಶ್ರೀಯುತ ಬಿ. ರಾಮರಾಯರು ಅಸ್ವಸ್ಥತೆಯನ್ನು ಹೊಂದಿದ್ದರಿಂದ ಉಳಿದ ಭಾಗವನ್ನು ಬರೆದು ಕಳಿಸಿಕೊಡುವದು ಅವರಿಂದ ಆಗಲಿಲ್ಲ ಮತ್ತು ಕನ್ನಡಿಗರ ದುರ್ದೈವದಿಂದ ಅವರು ಈಚೆಗೆ ದಿವಂಗತರಾದರು. ಆದ್ದರಿಂದ ಈ ಗ್ರಂಥವು ಅಪೂರ್ಣವಾಗಿ ಉಳಿದಿರುತ್ತದೆ. ಆದರೂ ಅದನ್ನು ಇಲ್ಲಿ ಪ್ರಕಟಿಸಿರುತ್ತೇವೆ.

ಐತಿಹಾಸಿಕ ಸಂಶೋಧನ ಕಾರ್ಯಗಳು ಏಕ ಕಾಲಕ್ಕೆ ಮುಗಿಯಲಾರವು. ಸಂಶೋಧಿತವಾದ ಸಂಗತಿಗಳನ್ನು ನಾವು ಕಾಲಕಾಲಕ್ಕೆ ಪ್ರಕಟಿಸುತ್ತ ಹೋದಲ್ಲಿ ಕೆಲವು ದಿನಗಳ ಮೇಲೆ ಪೂರ್ಣ ಇತಿಹಾಸವನ್ನು ಸಿದ್ಧಪಡಿಸಲು ಸಾಕಷ್ಟು ಸಾಮಗ್ರಿಗಳು ದೊರೆಯುವವು. ಆದ್ದರಿಂದ ನಮಗೆ ದೊರೆತ ಗ್ರಂಥ ಭಾಗವನ್ನಷ್ಟೇ ನಾವು ಇದರಲ್ಲಿ ಮುದ್ರಿಸಿದ್ದೇವೆ.

ಈ ಗ್ರಂಥದ ಮೂಲ ಹಸ್ತಲಿಖಿತ ಪ್ರತಿಯು ಯಾರಲ್ಲಾದರೂ ಇದ್ದರೆ ಅವರು ಅದನ್ನು ನಮ್ಮ ಕಡೆಗೆ ಕಳಿಸಿಕೊಡಬೇಕೆಂದು ನಮ್ರ ಸವಿನಯ ವಿನಂತಿ ಇದೆ. ಹಾಗೆ ಮಾಡಿದಲ್ಲಿ ಅದನ್ನು ಈ ಗ್ರಂಥದ ಮುಂದಿನ ಆವೃತ್ತಿಯಲ್ಲಿ ಸೇರಿಸಿ ಇಡೀ ಗ್ರಂಥವನ್ನು ಮುದ್ರಿಸುವೆವು.

ವಿಜಾಪುರ.
೨-೭-೧೯೪೩

ಫ. ಗು. ಹಳಕಟ್ಟಿ
ಸಂಪಾದಕ

## ಕೆಳದಿ ಸಂಸ್ಥಾನದ

# ರಾಯರ ವಂಶಾವಳಿ.

೧

ಕೆಳದಿಯೆಂಬ ಗ್ರಾಮದಲ್ಲಿ ಹಳೇಬೈಲುಯೆಂಬ ಭೂಮಿಯಲ್ಲಿ ಒಂದು ಹುತ್ತವಿತ್ತು. ಆ ಹುತ್ತದಲ್ಲಿ ರಾಮಲಿಂಗದೇವರು ಉದ್ಭವವಾಗಿ, ಆ ಸ್ಥಳದ ಗೌಡ ಬಸವಪ್ಪಯೆಂಬವನು ಗದ್ದೆ ಹೂಡಿಕೊಂಡು ಕೃಷಿ ರೂಪದಿಂದ ಕಾಲಕ್ಷೇಪ ಮಾಡಿಕೊಂಡು ಇರುತ್ತಾ ಇದ್ದಲ್ಲಿ, ಆ ಬಸಪ್ಪ ಎಂಬವನು ಈಶ್ವರಭಕ್ತ ಜ್ಞಾನಿಯಾಗಿದ್ದನು. ಆತನಿಗೆ ಬಸವಕ್ಕ ಯೆಂಬ ಉತ್ತಮ ಸ್ತ್ರೀ ಹೆಂಡತಿ ಯಿರುವಳು. ಆತನಿಗೆ ಚೌಡಪ್ಪ, ಭದ್ರಪ್ಪ ಎಂದು ಇಬ್ಬರು ಮಕ್ಕಳು ಹುಟ್ಟಿದರು. ಹುಟ್ಟಿದಾರಭ್ಯ ದಿನದಿನಕ್ಕೂ ಉಚ್ಛ್ರೇಯಸ್ಸು ಆಗುತ್ತಾ ಬಂತು. ಇವರು ಇಬ್ಬರು ಮಕ್ಕಳಿಗೂ ಮದಿವೆಯನ್ನು ಮಾಡಿ, ಕೆಲವು ದಿವಸದ ಮೇಲೆ ಇವರ ತಂದೆ ಬಸವಪ್ಪನೆಂಬವನು ಮೃತನಾಗಿ ಹೋದನು. ಆಮೇಲೆ ಈ ಉಭಯತ್ರರ ತಾಯಿ ಬಸವಕ್ಕ ಯೆಂಬವಳು ಈ ಯಿಬ್ಬರು ಮಕ್ಕಳನ್ನು ಸಂರಕ್ಷಣೆ ಮಾಡಿಕೊಂಡು ವಿದ್ಯಾಭ್ಯಾಸವನ್ನು ಕಲಿಸಿ, ಆ ತರುವಾಯ, ಇವರು ಯವ್ವನಸ್ಥರಾಗಿ ಆರ್ಜೇಯದಿಂದ ಬಂದ ಭೂಮಿಯನ್ನು ಮಾಡಿಕೊಂಡು ಹಳೆಬೈಲು ರಾಮೇಶ್ವರ ದೇವರ ಕೃಪೆಗೆ ಪಾತ್ರರಾಗಿ ಕೆಳದಿ ಸಂಸ್ಥಾನಕ್ಕೆ ಅರಸುಗಳಾದ ವಿವರಃ—

ಚವುಡಪ್ಪ ಎಂಬವನ ಸ್ವಪ್ನದಲ್ಲಿ ಒಬ್ಬ ಬ್ರಾಹ್ಮಣನು ಬಂದು ಹೇಳಿದುದುಃ— ಕೆಳದಿ ಪ್ರಾಂತ್ಯದಲ್ಲಿ ಸೀಗೆಬೈಲು ಯೆಂಬ ಸ್ಥಳದಲ್ಲಿ ಸೀಗೆ ಮೆಳೆಯಲ್ಲಿ ರಾಮೇಶ್ವರಲಿಂಗ ಉದ್ಭವವಾಗಿದೆ. ಇದಕ್ಕೆ ದೃಷ್ಟಾಂತವೇನು, ಎಂದರೆ— ನಿಮ್ಮ ಮನೆಯಲ್ಲಿರುವ ಕಪಿಲೆ ಆಕಳು ಆ ಸ್ಥಳಕ್ಕೆ ಕರು ಸಮೇತ ಹೋಗಿ ಆ ಹುತ್ತದ ಮೇಲೆ ದಿನಂಪ್ರತಿಯಲ್ಲಿ ಹಾಲು ಕರೆದು ಬರುತ್ತಾ ಇದೆ. ಇದೇ ದೃಷ್ಟಾಂತ ನೋಡಿಕೊಂಡು ರಾಮೇಶ್ವರ ಲಿಂಗಕ್ಕೆ ನೀನು ಭಕ್ತಿಭಾವದಿಂದ ಪೂಜೆ ಮಾಡಿಕೊಂಡು ಬಂದಲ್ಲಿ, ನಿನಗೆ ಬಹಳ ರಾಜ್ಯಾಧಿಪತ್ಯ ಆಗುತ್ತದೆ—ಎಂಬದಾಗಿ ಹೇಳಿ ಬ್ರಾಹ್ಮಣನು (ಅದೃಶ್ಯವಾಗಿ) ಹೋದನು. [ಚವುಡಪ್ಪನು] ಬಹಳ ಸಂತೋಷದಿಂದ ತನ್ನ ತಾಯಿಯ ಮುಂದೆ ಹೇಳಿ, ಬೆಳಗು ಆಗುತ್ತಲೇ

ತನ್ನ ಕಡೆಯ ಮನುಷ್ಯನನ್ನು ಆ ಕಪಿಲೆ ಗೋವಿನ ಮೇಲೆ ಕಾವಲಿಟ್ಟು ಇದ್ದಲ್ಲಿ, ಆ ಕಪಿಲೆಗೋವು ಆ ದೇವರ ಬಳಿಗೆ ಹೋಗಿ ಹಾಲು ಕರೆದುದು ಆ ಮನುಷ್ಯನು ನೋಡಿ ಬಂದು ಹೇಳಿದಲ್ಲಿ, ಚವುಡಪ್ಪನು ಈ ಹುತ್ತದ ಬಳಿಯಲ್ಲಿ ಹೋಗಿ ರಾಮೇಶ್ವರ ಲಿಂಗವನ್ನು ಕಂಡು ಅಲ್ಲಿದ್ದ ಮರಮುಟ್ಟು ಗಿಡಗಳನ್ನು ಕಡಿಸಿ, ಮೈದಾನ್ ಮಾಡಿಸಿ, ಹುಲ್ಲಿನಿಂದ ಸಣ್ಣಕ್ಕೆ ದೇವಸ್ಥಾನವನ್ನು ಕಟ್ಟಿಸಿ, ಆ ದೇವರಿಗೆ ಧೂಪ ದೀಪ ನೈವೇದ್ಯ ಮುಂತಾಗಿ ನಡೆಯುವಂತೆ ನೇಮಕ ಮಾಡಿ, ಆ ಮೇಲೆ ಒಂದು ದಿವಸ ತನ್ನ ಗದ್ದೆ ನೋಡಿಕೊಂಡು ಬರುವುದಕ್ಕೆ ಹೋಗಿ ಪುನಃ ಮನೆಗೆ ಬರುವಾಗ್ಗೆ ಮಾರ್ಗದಲ್ಲಿ ಶ್ರಮೆಬಟ್ಟು ಮಾವಿನ ಮರದ ಕಟ್ಟೆಯ ಮೇಲೆ ಮಲಗಿದ್ದಲ್ಲಿ, ನಿದ್ರೆ ಬಂದು ಇತ್ತು. ಇವನ ತಾಯಿ ಬಸವಕ್ಕನು 'ಮಗನು ಬರುವುದಕ್ಕೆ ಬಹಳ ಹೊತ್ತಾಯಿತು, ಬರಲಿಲ್ಲ, ಗದ್ದೆಗೆ ಹೋಗಿ ನೋಡಿಕೊಂಡು ಬರುವಾ' ಎಂಬುದಾಗಿ ಹೋಗುತ್ತಾ ಇರಲಾಗಿ, ಆ ಮಾರ್ಗದಲ್ಲಿ ಮಾವಿನ ಕಟ್ಟೆಯ ಮೇಲೆ ಮಲಗಿರುವ ಮಗನನ್ನು ಕಂಡು, ಅವನ ತಲೆಯ ಮೇಲೆ ನಾಗಸರ್ಪವು ಹೆಡೆಯಾಡುತ್ತ ಇದ್ದುದನ್ನು ಕಂಡು, ತನ್ನ ಮಗನಿಗೆ ಮೋಸ ಮಾಡುತ್ತೆ ಯೆಂಬದಾಗಿ ಬಹಳ ಗಾಬರಿಯಾಗಿ ನೋಡುತ್ತಾ ಇರಲಾಗಿ, ಆ ನಾಗಸರ್ಪವು ಎರಡು ಘಳಿಗೆಯ ಮೇಲೆ ಇಳಿಯುವಾಗ್ಗೆ, ಮಗನನ್ನು ಎಬ್ಬಿಸಿ "ದೊಡ್ಡ ಸರ್ಪ ಬಂದು ಇತ್ತು. ಇದರಲ್ಲಿ ನೀನು ಬದುಕಿದ್ದು ಆಶ್ಚರ್ಯ"-ಯೆಂಬದಾಗಿ ಹೇಳುತ್ತಾ ಇದ್ದ ಹಾಗೆ, ಆ ಸರ್ಪವು ಕೆಲವು ದೂರ ಹೋಗಿ ಈ ಯಿಬ್ಬರಿಗೂ ಕಾಣಿಸಿಕೊಂಡು, ಆ ಸರ್ಪವು ಹೆಡೆಯೆತ್ತಿ ಇವರಿಬ್ಬರನ್ನು ಕರೆದ ಹಾಗೆ ಇಶಾರೆ ಮಾಡುತ್ತಾ ಇದ್ದುದರಿಂದ, ಇವರಿಬ್ಬರೂ ನಾಗಸರ್ಪದ ಬಳಿಗೆ ಹೋಗಿ ಇದ್ದಲ್ಲಿ, ಇವನ ಗದ್ದೆಯಲ್ಲಿ ಹೆಡೆಯಿಂದ ಭೂಮಿಗೆ ಸೂಚನೆ ತೋರಿಸಿ ಆ ಸರ್ಪವು ಹೋಯಿತು. ಆ ಮೇಲೆ ಇವರು ಆ ಸ್ಥಳವನ್ನು ದೃಷ್ಟಿಯಿಂದ ನೋಡಿಕೊಂಡು, ಮನೆಗೆ ಬಂದು ತನ್ನ ತಮ್ಮ ಚವುಡಪ್ಪನ (?) ಮುಂದೆ ಹೇಳಿ ಸರ್ವರು ಬಹಳ ಸಂತೋಷ ಮಾಡಿಕೊಂಡು ಭೋಜನವನ್ನು ಮಾಡಿ ಗದ್ದೆಗೆ ಬೇಕಾದ ಸಾಮಾನು ಹಾರೆ, ಗುದ್ದಲಿ, ಆಳು ಮುಂತಾಗಿ ತೆಗೆದುಕೊಂಡು ಹೋಗಿ ಆ ಭೂಮಿಗೆ ನೇಗಿಲು ಹಾಕಿದ್ದಲ್ಲಿ, ಆ ನೇಗಿಲ ಮೊನೆಗೆ ನಿಕ್ಷೇಪದ ಕಡಾಯಿ ತಗಲಿ ಶಬ್ದವಾದುದರಿಂದ ಆ ಜನರು ಕಡಾಯಿ ನೋಡುವುದರಲ್ಲಿ ಅಪರಿಮಿತ ದ್ರವ್ಯ ಕಂಡುದರಿಂದ, ಆ ಸ್ಥಳದಲ್ಲಿ ಮನೆಯನ್ನು ಕಟ್ಟಿ, ಕುಟುಂಬ ಸಹಿತವಾಗಿ ಅಲ್ಲೇ ಇರುತ್ತಾ ಇರಲು, ಕೆಲವು ದಿವಸದ ಮೇಲೆ ಚವುಡಪ್ಪನಿಗೆ ಒಬ್ಬ ಮಗನು ಹುಟ್ಟಿದನು. ಆತನಿಗೆ ಸದಾಶಿವ



ನೆಂದು ಹೆಸರಿಟ್ಟು ವಿದ್ಯಾಭ್ಯಾಸವನ್ನು ಕಲಿಸಿ, ಯವ್ವನಸ್ಥನಾಗುತ್ತಲೇ ವೀರಕ್ಕ ಭದ್ರಕ್ಕ ಎಂಬ ಹೆಂಗಸರನ್ನು ಮದುವೆ ಮಾಡಿ, ಕೆಳದಿ ರಾಮೇಶ್ವರ ದೇವರ ದರ್ಶನ ಕೊಡಿಸಿ, ಮಕ್ಕಳನ್ನು ಪೋಷಣೆ ಮಾಡಿಕೊಂಡು ಬರುತ್ತಾ ಇರಲಾಗಿ, ಅವರು ಬಹಳ ಪರಾಕ್ರಮಶಾಲಿಗಳಾಗಿ ಎಡಬಲದಲ್ಲಿದ್ದ ಗ್ರಾಮವನ್ನು ಗುತ್ತಿಗೆಯನ್ನು ಮಾಡಿಕೊಂಡು ಪ್ರಖ್ಯಾತರಾಗಿರುತ್ತಾ ಇದ್ದರು.

೨

## ಪೂರ್ವದ ಅರಸುಗಳ ವಂಶಾವಳಿ.

ವಿದ್ಯಾನಗರವೆಂಬ ಸ್ಥಳಗಳಲ್ಲಿ ಹರಿಹರರಾಯ, ಬುಕ್ಕರಾಯ, ರಾಮರಾಯರ ವಂಶಾವಳಿಗಳ ವಿವರಃ—

ಶ್ರೀ ಭಗವತ್ಪಾದಾಚಾರ್ಯರು ಮಂಡನಮಿಶ್ರನ ಕಯ್ಯ ಜಯಪತ್ರಿಕೆಯನ್ನು ತೆಗೆದುಕೊಂಡು, ಅಮರುಕ ಗ್ರಂಥವನ್ನು ಮಾಡಿ, ಶಾರದಾ ಪ್ರತಿಮೆಯನ್ನು ತಂದು ಶೃಂಗೇರಿಯಲ್ಲಿ ಪ್ರತಿಷ್ಠೆ ಮಾಡಿ, ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಷಡ್ದರ್ಶನ ಸ್ಥಾಪನಾಚಾರ್ಯರನ್ನು ಕೂಡಿ, ಜಗದ್ಗುರುಗಳು ಎಂಬುದಾಗಿ ಪ್ರಖ್ಯಾತರಾಗಿ, ಶಂಕರಾಚಾರ್ಯರು, ಪಾದಪದ್ಮಾಚಾರ್ಯ, ತೋಟಕಾಚಾರ್ಯ, ಹಸ್ತಾಮಲಕಾಚಾರ್ಯ, ಸುರೇಶ್ವರಾಚಾರ್ಯರೆಂಬ ನಾಲ್ಕು ಮಂದಿ ಶಿಷ್ಯರನ್ನು, ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಚತುಸ್ಸಮುದ್ರ ಪರ್ಯಂತ ನಾಲ್ಕು ಕಡೆಯಲ್ಲಿ ಮಠವನ್ನು ಕಟ್ಟಿ, ಆ ಮಠದಲ್ಲಿ ನಾಲ್ಕು ಮಂದಿ ಶಿಷ್ಯರನ್ನು ಇಟ್ಟು, ಅವರು ವಿದ್ಯಾಶಂಕರರು ಯೆಂಬ ಶಿಷ್ಯರನ್ನು ಮಾಡಿಕೊಂಡು ಇರುತ್ತಾ ಇದ್ದಲ್ಲಿ, ಶಂಕರಾಚಾರ್ಯರು ಮುಕ್ತರಾದರು. ಆ ಮೇಲೆ ಉತ್ತರದೇಶವಲ್ಲಿ ಕೃಷ್ಣಾತೀರದಲ್ಲಿರುವ ಮಾದೋ (ಮಾಧವ) ಭಟ್ಟರೆಂಬವರು ದಕ್ಷಿಣ ದೇಶಕ್ಕೆ ಬಂದು ಹಂಪೆಯಲ್ಲಿದ್ದು, ಐಶ್ವರ್ಯ ಅಪೇಕ್ಷಿತರಾಗಿ ಶ್ರೀಚಕ್ರಯಂತ್ರೋದ್ಧಾರವನ್ನು ಮಾಡಿ ಪುರಶ್ಚರಣೆಮಾಡುತ್ತಾ ಇದ್ದಲ್ಲಿ, ಶ್ರೀ ಲಕ್ಷ್ಮೀದೇವಿಯವರು ಪ್ರಸನ್ನರಾಗಿ—ಈ ಜನ್ಮದಲ್ಲಿ ನಿಮಗೆ ಐಶ್ವರ್ಯ ಪ್ರಾಪ್ತಿ ಇಲ್ಲ. ಇನ್ನೊಂದು ಜನ್ಮಕ್ಕೆ ಪ್ರಾಪ್ತಿ ಆದೀತು—ಎಂಬದಾಗಿ ಸ್ವಪ್ನದಲ್ಲಿ ಅಪ್ಪಣೆಕೊಟ್ಟುದರಿಂದ ಇದನ್ನು ಮನಸ್ಸಿನಲ್ಲಿಟ್ಟು [ಕೊಂಡು], ಮಾದೋಭಟ್ಟರು ವಿದ್ಯಾಶಂಕರರ ಆಜ್ಞಾನುಸಾರವಾಗಿ ಸನ್ಯಾಸಾಶ್ರಮದ ಅಂಗೀಕಾರವನ್ನು ಮಾಡಿಕೊಂಡು, ವಿದ್ಯಾರಣ್ಯರು ಯೆಂಬುದಾಗಿ ಹೆಸರು ಸಂಪಾದಿಸಿಕೊಂಡು ಪ್ರಸಿದ್ಧರಾಗಿ [ದ್ದರು.] ಆ ದೇಶದಲ್ಲಿ ಜೈನ (ಜೈನ?) ಕಿರಾತರು ತಮ್ಮ

ತಮ್ಮ ಜಾತಿಯನ್ನು ಪ್ರಬಲವಮಾಡಿಕೊಂಡು ನಡೆಯುತ್ತಾ ಇದ್ದರು. ಆ ದೇಶದಲ್ಲಿ ಒಂದು ಪಟ್ಟಣವನ್ನು ನಿರ್ಮಾಣಮಾಡಿ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡಿ ನಡೆಯತಕ್ಕ ಬಗ್ಗೆ ರಾಯಪಟ್ಟಣವನ್ನು ಕಟ್ಟುವಂತೆ ಶ್ರೀ ಲಕ್ಷ್ಮೀದೇವಿಯವರು ವಿದ್ಯಾರಣ್ಯರಿಗೆ ಸ್ವಪ್ನದಲ್ಲಿ ಅಪ್ಪಣೆ ಕೊಟ್ಟಿದರಿಂದ ಸ್ವಪ್ನದ ಅರ್ಥವನ್ನು ಮನಸ್ಸಿನಲ್ಲಿಟ್ಟು (ಕೊಂಡಿದ್ದರು.)

ಆ ಮೇಲೆ ಕೆಲವು ದಿವಸದ ಮೇಲೆ ಉತ್ತರ ದೇಶದಿಂದ ಇಬ್ಬರು ಅಣ್ಣಾತಮ್ಮಂದಿರು, ಕ್ಷತ್ರಿಯ ಜಾತಿಯವರು, ದಕ್ಷಿಣದೇಶಕ್ಕೆ ಬಂದು, ಧನಗರ ಜಾತಿಯಲ್ಲಿ ಕನ್ಯಾ ತೆಗೆದುಕೊಂಡು ಲಗ್ನವನ್ನು ಮಾಡಿಕೊಂಡು, ಸುಖದಿಂದ ಇರುತ್ತಾ ಇದ್ದಲ್ಲಿ, ಇವರಲ್ಲಿ ಹಿರಿಯನಾದ ಹರಿಹರರಾಯಗೆ ಸ್ವಪ್ನವಾದುದು ಏನೆಂದರೆ:—"ನೀನು ನಿನ್ನ ತಮ್ಮ ಬುಕ್ಕ ಸಹ ವಿದ್ಯಾರಣ್ಯರ ಬಳಿಗೆ ಹೋಗಿ ಆಶ್ರಯಮಾಡಿಕೊಂಡು ಇದ್ದಲ್ಲಿ ಐಶ್ವರ್ಯ ಪ್ರಾಪ್ತಿಯಾಗುತ್ತೆ"—ಯೆಂಬುದಾಗಿ ಇವರಿಗೆ ಸ್ವಪ್ನ ಆದದ್ದರಿಂದ, ಹರಿಹರ ಬುಕ್ಕ ಯಿಬ್ಬರೂ ಹಂಪೆಗೆ ಬಂದು ವಿದ್ಯಾರಣ್ಯರನ್ನು ಕಂಡು, ಸ್ವಪ್ನವನ್ನು ಹೇಳಲಾಗಿ, ವಿದ್ಯಾರಣ್ಯರು ಹಂಪೆ ಸ್ಥಳದವರನ್ನು ಕರೆಸಿ ವಿಚಾರಿಸಿದುದರಲ್ಲಿ, ಅವರು ಹೇಳಿದ ವಿವರ— ಪೂರ್ವದಲ್ಲಿ ಸೂರ್ಯವಂಶದಲ್ಲಿ ಹುಟ್ಟಿದ ತ್ರಿಶಂಕುರಾಯನು ಪಂಪಾಕ್ಷೇತ್ರಕ್ಕೆ ಬಂದು ಈ ವಿರೂಪಾಕ್ಷ ಲಿಂಗವು ಪ್ರಾದುರ್ಭವವೋ? ಪ್ರತಿಷ್ಠಾಲಿಂಗವೋ? ಎಂಬುದಾಗಿ ವಿಚಾರಿಸಿದ್ದಲ್ಲಿ "ಈ ಲಿಂಗವು ಜ್ಯೋತಿರ್ಮಯರೂಪ ಈ ದೇವರ ಮಹಿಮೆ ಬ್ರಹ್ಮದೇವರಿಗೆ ಹೇಳಲಿಕ್ಕೆ ಅಸಾಧ್ಯ" ವೆಂಬದಾಗಿ ಹೇಳಲಾಗಿ, ಆ ಮಾತು ಕೇಳಿ, ಪ್ರಾದುರ್ಭವಲಿಂಗಕ್ಕೆ ಪ್ರತಿಷ್ಠಾಲಿಂಗವೆಂದು ಕೇಳಿದ ದೋಷದ ನಿವೃತ್ತಿಗೋಸ್ಕರ, ಕೃಷ್ಣಾನದೀ ಆರಭ್ಯ ಸೇತು ರಾಮೇಶ್ವರ ಪರ್ಯಂತ ಮೂರೂವರೆ ಕೋಟಿ ರಾಜ್ಯವನ್ನು ವಿರೂಪಾಕ್ಷಸ್ವಾಮಿಗೆ ಧಾರೆಯೆರೆದು ಹೋಗಿದ್ದಾನೆ—ಎಂಬದಾಗಿ ಆ ಸ್ಥಳದವರು ಹೇಳಿದುದರಿಂದ ಹರಿಹರ ಬುಕ್ಕರನ್ನು ಕರೆದು, 'ಈ ರಾಜ್ಯಕ್ಕೆ ವಿರೂಪಾಕ್ಷಸ್ವಾಮಿಯೆ ಕರ್ತ. ನೀವು ಈ ದೇವರ ಭಕ್ತರಾಗಿ ವರ್ತಿಸುತ್ತಾ ವಿರೂಪಾಕ್ಷಸ್ವಾಮಿಯೆಂದು ಮೊಹರು ಮಾಡುತ್ತಾ ಧರ್ಮದಿಂದ ರಾಜ್ಯಪರಿಪಾಲನೆ ಮಾಡಿ' ಎಂತ ಅಪ್ಪಣೆ ಕೊಟ್ಟದ್ದರಿಂದ, ಹರಿಹರಗೆ ಹರಿಹರರಾಯ ಎಂದು ಹೆಸರಿಟ್ಟು ವಿದ್ಯಾನಗರ ಎಂದು ಪಟ್ಟಣವನ್ನು ನಿರ್ಮಿಸಿ, ಆ ಪಟ್ಟಣಕ್ಕೆ ಕೆಸರುಗಲ್ಲು ಹಾಕುವುದಕ್ಕೆ ಮುಹೂರ್ತವನಿಟ್ಟು ಇದ್ದಲ್ಲಿ, ಆ ಸಮಯ



ದಲ್ಲಿ ಒಬ್ಬ ದಾಸನು ಶಂಖಸ್ವರವನ್ನು ಮಾಡಿದುದರಿಂದ ಕೆಸರುಗಲ್ಲು ಹಾಕಿ ಪಟ್ಟಣವನ್ನು ಕಟ್ಟಿದರು. ವಿದ್ಯಾರಣ್ಯರು ಮಾಡಿದ ಲಗ್ನಕ್ಕೆ ವ್ಯತ್ಯಾಸವಾದುದರಿಂದ 'ಈ ಪಟ್ಟಣವು ಕೆಲವು ವರ್ಷದ ಮೇಲೆ ತುರುಕರ ಆಧೀನ ಆದೀತು'—ಎಂದು ವಿದ್ಯಾರಣ್ಯರು ಭವಿಷ್ಯವನ್ನು ಹೇಳಿ, ಕೆಲವು ಕಾಲ ಜ್ಞಾನವನ್ನು ಬರೆಯಿಸಿ, ವಿದ್ಯಾನಗರ ರತ್ನಸಿಂಹಾಸನದಲ್ಲಿ ಹರಿಹರರಾಯನಿಗೆ ಪಟ್ಟಾಭಿಷೇಕವನ್ನು ಮಾಡಿಸಿ, ಹೀಗೆ ಇರಲಾಗಿ, ಕೆಲವು ದಿವಸದ ಮೇಲೆ ರೇವಣಸಿದ್ಧನೆಂಬ ಒಬ್ಬ ಬ್ರಾಹ್ಮಣನು ಬಂದು ಒಂದು ಲಿಂಗವನ್ನು ವಿದ್ಯಾರಣ್ಯರಿಗೆ ಕೊಟ್ಟು, ಈ ಲಿಂಗವು ಚಂದ್ರಮೌಳೀಶ್ವರ ಸ್ವಾಮಿಗಳು ದಿನಚರಿಯಲ್ಲಿ ಪೂಜೆಮಾಡತಕ್ಕದ್ದು ಯೆಂದು ಹೇಳಿ ಅಂತರ್ಧಾನವಾದನು. ಅನಂತರ ವಿದ್ಯಾರಣ್ಯರು ಶೃಂಗೇರಿಗೆ ಬಂದು ವಿದ್ಯಾಶಂಕರರನ್ನು ಕಂಡು, ಶೃಂಗೇರಿಯ ಮೂಲ ಸಂಸ್ಥಾನದಲ್ಲಿ ಆ ಚಂದ್ರಮೌಳೀಶ್ವರ ದೇವರ ಪೂಜೆ ಮಾಡುತ್ತ, ಶಿಷ್ಯ ಪಾರಂಪರ್ಯವಾಗಿ ಈ ಲಿಂಗವನ್ನು ಪೂಜಿಸತಕ್ಕದ್ದೆಂದು ಕಟ್ಟು ಮಾಡಿದರು. ಇತ್ತಲಾಗಿ ವಿದ್ಯಾನಗರ ಸಂಸ್ಥಾನವೆಂದು ದಿಗ್ದೇಶದಲ್ಲಿ ಪ್ರಸಿದ್ಧವಾಯಿತು. ಆ ರತ್ನಸಿಂಹಾಸನ ಆಳಿದ ರಾಯರ ವಂಶಾವಳಿ ವಿವರ:—

ಹರಿಹರರಾಯರು, ಬುಕ್ಕರಾಯರು, ಹರಿಹರರಾಯರು, ವಿರೂಪಾಕ್ಷರಾಯರು, ಬುಕ್ಕರಾಯರು, ದೇವರಾಯರು, ರಾಮರಾಯರು, ವಿರೂಪಾಕ್ಷರಾಯರು, ದೇವರಾಯರು, ವಿಠ್ಠಲರಾಯರು, ಮಲ್ಲಿಕಾರ್ಜುನರಾಯರು, ರಾಮರಾಯರು, ವಿರೂಪಾಕ್ಷರಾಯರು,— ಅಂತು ಹದಿಮೂರು ಜನರು. ಆ ಮೇಲೆ ತುರುಕರ ಜನ ಮೂರು. ಆ ಮೇಲೆ ತುಳುವರಾಯರು ಜನ ಒಂದು. ಚೋಳರಾಯರ ಜನ ಒಂದು. ಪ್ರಹುಡ (ಪ್ರೌಢ) ರಾಯರು, ವರ್ಷ ಹನ್ನೆರಡು. ಅಚ್ಯುತರಾಯರು, ವರ್ಷ ಮೂರು. ನರಸಿಂಗರಾಯರು, ವರ್ಷ ಹತ್ತು. ಸಾಳ್ವ ನರಸಿಂಹರಾಯರು, ವರ್ಷ ಹನ್ನೆರಡು. ಕೃಷ್ಣರಾಯರು, ವರ್ಷ ನಲವತ್ತು. ಸದಾಶಿವರಾಯರು, ವರ್ಷ ಎರಡು. ರಾಮರಾಯರು, ವರ್ಷ ಇಪ್ಪತ್ತನಾಲ್ಕು—ಅಂತು ಜನ ಏಕ್ಕೆ ವರ್ಷ ೧೦೩. ಈ ರಾಮರಾಯರನ್ನು ವಿಜಾಪುರದ ಬಾದಷಹ, ಭಾಗಾನಗರದ ಬಾದಶಹ, ಅಹ್ಮದಾನಗರದ ಬಾದಷಹ, ಇವರು ಮೂರೂ ಮಂದಿಯೂ ಒಟ್ಟಾಗಿ ಮೋಸದಿಂದ ಹತವನ್ನು ಮಾಡಿ, ರಾಯರ ಸಂಸ್ಥಾನವನ್ನು ಸಂಕ್ಷೇಪದಿಂದ ಆಳಿದರು. ವಿವರ:—

ಈ ರಾಮರಾಯರ ತರುವಾಯ ಭೂಮಿ ಸ್ವಲ್ಪ ಮಂದಿ ಕುದುರೆ ಫೌಜು ಮಾಡಿಕೊಂಡು ವೆಂಕಟಪತಿರಾಯರು ವರ್ಷ ಮೂರು, ತತ್ಪುತ್ರ ಶ್ರೀರಂಗರಾಯರು ವರ್ಷ ೫|| ಆಳಿ, ನಿಸ್ತರಿಸಲಾರದೆ, ರಾಮರಾಯರ ಮಕ್ಕಳು ರಂಗರಾಯರು ವೆಂಕಟಪತಿರಾಯರು ಸಹ ಆನೆಗೊಂದಿಯಲ್ಲಿ ನಿಂತು ಆಳಿ ಇದ್ದು, ಇದೇ ಶ್ರೀರಂಗರಾಯರು ವರ್ಷ ೫, ವೆಂಕಟಪತಿ ರಾಯರು ವರ್ಷ ೭||, ರಾಮದೇವರಾಯರು ವರ್ಷ ೬, ವೆಂಕಟಪತಿರಾಯರು ವರ್ಷ ೧೭||, ಶ್ರೀರಂಗರಾಯರು ವರ್ಷ ೩೭||, ಈ (ರೀತಿ)ಯಲ್ಲು ಆನೆಗೊಂದಿಯಲ್ಲಿ ಆಳಿದರು. ರಾಯಪರಾಯರ ಹಿರೇಮಗ ತಿಮ್ಮಪ್ಪರಾಯ, ರಾಮರಾಯ, ಪಿ (ಪೆ?) ದ ವೆಂಕಟಪತಿರಾಯ, ಚಿಕ್ಕವೆಂಕಟಪತಿರಾಯ, ಇವರ ಮಕ್ಕಳು ಆದ ವೆಂಕಟಪತಿರಾಯ, ಚಿಕ್ಕವೆಂಕಟಪತಿರಾಯ, ಈ ವಿದ್ಯಾನಗರ ರತ್ನಸಿಂಹಾಸನಾಧೀಶ್ವರರಾದ ಹರಿಹರರಾಯ ಬುಕ್ಕರಾಯರ ವಂಶಪಾರಂಪರ್ಯ.

೨

ಪ್ರಕೃತ— ಹಳೆಬೈಲು ಬಸವಪ್ಪನ ಮಕ್ಕಳು ಚವುಡಪ್ಪನು ಪರಾಕ್ರಮಶಾಲಿಯಾಗಿ ಇರುತ್ತಾ ಇದ್ದಲ್ಲಿ, ಇವರಿಗೆ ನಿಕ್ಷೇಪ ಸಿಕ್ಕಿದ ವಾರ್ತೆ ಮುಂತಾದ್ದು ಖ್ಯಾತಿಯಾಗಿ ಇರಲಾಗಿ, ವಿದ್ಯಾನಗರದ ದೊರೆಯಾದ ಅಚ್ಯುತರಾಯನು ಕೇಳಿ, ‘ ಪ್ರಭುತ್ವಮಾಡುವಂಥವರು ಕ್ಷುದ್ರ ಮಾತು ಕೇಳಿ, ಸಜ್ಜನರಾಗಿರುವಂಥವರನ್ನು ದ್ರವ್ಯಸ್ಥರಾದರೂ ಕೆಡಿಸಬಾರದು, ಸಂತೋಷದಿಂದ ರಕ್ಷಿಸುವುದು ರಾಜಧರ್ಮವೆಂದು ಗ್ರಹಿಸಿ, ಇವರ ಮುಖದಲ್ಲಿ ದುಷ್ಟರಾದಂಥ ಬಲಿಷ್ಠರನ್ನು ನಿಗ್ರಹ ಮಾಡಿಸಿ, ಇವರ (ನ್ನು) ಪ್ರತಿಷ್ಠೆಗೆ ತರಬೇಕೆಂದು ಆಲೋಚಿಸಿ, ಕೃಷ್ಣರಾಯರು ಮುಂತಾದ ಸಾಮಾಜಿಕ ನಿಯೋಗಿಗಳ ಸಂಗಡ ಮನೋಭಿಪ್ರಾಯವನ್ನು ಹೇಳಿ, ರಾಯಸವನ್ನು ಬರೆಸಿ, ಕುದುರೆ ಪಾಲಕಿ ಉಡುಗೆರೆ ನೊದಲಾದುದು ಕೊಟ್ಟು, ಹಳೆಬೈಲಿಗೆ ಹೋಗಿ ಚವುಡಪ್ಪ ಭದ್ರಪ್ಪ ಸಹ ಕರಕೊಂಡು ಬನ್ನಿ ಎಂಬುದಾಗಿ ಹೇಳಿ ಕಳುಹಿಸಿಕೊಟ್ಟು, ಸ್ಥಳಕ್ಕೆ ಕರೆಸಿಕೊಂಡು, ಉಲುಪೆ ಮುಂತಾದುದು ಕಳುಹಿಸಿಕೊಟ್ಟು, ಬಿಡಾರವನ್ನು ಬಿಡಿಸಿ ಕೊಟ್ಟು, ಒಂದು ದಿವಸ ಆಪ್ತಜನರನ್ನು ಕೂಡಿಕೊಂಡು ಸಂತೋಷದಿಂದ ಇವರನ್ನು ಕರೆಸಿ, ಕ್ಷೇಮಲಾಭವನ್ನು ಕೇಳಿ, ಇವರು ಕೊಟ್ಟಂಥ ನಜರನ್ನು ತೆಗೆದುಕೊಂಡು ಇವರನ್ನು ಕೇಳಿದ ವಿವರಃ— “ನೀವು ಬಡವರು. ಹೇರಳ ದ್ರವ್ಯ ಹೇಗೆ ಪ್ರಾಪ್ತಿಯಾಯಿತು ? ದೊರೆ ತನಕ ತಿಳಿಸದೆ ಹೇಗೆ ದ್ರವ್ಯವನ್ನು ವಂಚನೆ



ಮಾಡಿಯಿದ್ದೀರಿ ? ” ಎಂಬುದಾಗಿ ಕೇಳಿದಲ್ಲಿ, ಈ ಚೌಡಪ್ಪ ಭದ್ರಪ್ಪನು ಹೇಳಿದ ವಿವರ— ‘ನಾವು ಬಡವರಾಗಿರುತ್ತಾ ಇದ್ದಲ್ಲಿ ರಾಮೇಶ್ವರದೇವರ ಅನುಗ್ರಹದಿಂದ ನಿಕ್ಷೇಪ ಸಿಕ್ಕಿದುದು ಸರಿ’ ಎಂಬುದಾಗಿ ಪೂರ್ವಾರಭ್ಯಕಥಾ ನಡೆದ ಅಭಿಪ್ರಾಯವನ್ನು ಸಾಂಗವಾಗಿ ಹೇಳಿದುದರಿಂದ ಕೇಳಿ ಸಂತೋಷಪಟ್ಟು, ಇವರು ಈಶ್ವರಭಕ್ತರು, ಬುದ್ಧಿವಂತರು, ದಯವಾದರ್ಬಾರ್, ಪುಣ್ಯವಂತರೆಂದು ಯೋಚಿಸಿ, ಇವರಿಗೆ ಕು___, ಪಾಲಕಿ, ಚಾವರಿ ಮುಂತಾದ ಬಿರುದು ಬಾವಲಿಯನ್ನು ಕೊಟ್ಟು ಸಮೀಪದಲ್ಲಿ ಇಟ್ಟುಕೊಂಡು ಇದ್ದರು. ಆ ಪ್ರಾಂತದಲ್ಲಿ ತುಂಟು ಪಾಳೇಗಾರರು ಪ್ರಬಲರಾಗಿ ರಾಜ್ಯವನ್ನು ಬಾಧಿಸುತ್ತಾ ಇರಲು, ಇವರ ಸಂಗಡ ಫೌಜನ್ನು ಕೊಟ್ಟು ಕಳುಹಿಸಿ ಇದ್ದಲ್ಲಿ, ಇವರು ಹೋಗಿ ಲಡಾಯಿ ಮಾಡಿ ಜಯಪ್ರದ ಮಾಡಿಕೊಂಡು ಸಿಕ್ಕಿದಂತಹ ಜನರು (ನಜರು?) ತಂದು ದೊರೆಗೆ ಒಪ್ಪಿಸಿದ್ದಲ್ಲಿ, ಪ್ರೇಮಾಲಿಂಗನವನ್ನು ಮಾಡಿ ಮನ್ನಿಸಿ ಉಡುಗೊರೆ ಕೊಟ್ಟು ಸಂತೋಷದಲ್ಲಿ ಇರಿಸಿಕೊಂಡು ಇರುತ್ತಾ ಇದ್ದಲ್ಲಿ, ಆ ದೇಶದಲ್ಲಿ ತುರುಕರ ಉಪದ್ರವ ಹೇರಳವಾದುದರಿಂದಲೂ, ಫೌಜು ಕೊಟ್ಟು ಆ ದೇಶದವೊಳಗೆ ಕೆಲವು ದಿವಸ ಇಟ್ಟು ಯಿದ್ದು, ಆ ತರುವಾಯ ಸಮೀಪಕ್ಕೆ ಕರಕೊಂಡು ಚಂದ್ರಗುತ್ತಿ ಪ್ರಾಂತ್ಯದಲ್ಲಿ ಕೆಳದಿಯಾದಿಯಾಗಿ ಎಂಟು ಮಾಗಣೆಯನ್ನು ಆಳಿಕೊಂಡು ಇರುವಂತೆ ನೇಮಕ ಮಾಡಿಸಿ, ನಿಮ್ಮ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬನ್ನಿ ಯೆಂಬದಾಗಿ ಶಾಸನವನ್ನು ಬರೆಸಿ ಕೊಟ್ಟು, ಎಂಟು ಮಾಗಣೆಗೂ ನೀವೇ ರಾಯರು (ರೆ)ನಿಸಿ ನಮಗೆ ಸಾನುಕೂಲವಾಗಿ ಇರಿ ಯೆಂಬದಾಗಿ ನೇಮಿಸಿ, ಅಲ್ಲಿಂದಲೇ ಶಂಖ, ಚಕ್ರ, ಚಪುರಿ, ಉಭಯ ಚಾಮರ ಮುಂತಾದ ಬಿರುದು ಬಾವಲಿಯನ್ನು ಕೊಟ್ಟು ಕಳುಹಿಸಿದರಿಂದ, ಈ ಕರ್ತರು ಸಾಮಾಜಿಕರು ಕುದುರೆ ಮಂದಿ ಕೆಳದಿಗೆ ಬಂದು ಎಂಟು ಮಾಗಣೆ ರೈತರು ಸಹಿತ ಕರೆಕಳುಹಿಸಿ, ಕೌಲು ಕರಾರು ಕೊಟ್ಟು, ಇಕ್ಕೇರಿಯ ಬಳಿಯಲ್ಲಿ ಹೂಡೆ ಅರಮನೆ ಕಟ್ಟಿಸಿ, ಕುಟುಂಬ ಸಹಿತವಾಗಿ, ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲೀವಾಹನ ಶಕ ವರ್ಷ ೧೪೨೨ ವರ್ತ(ಮಾ) ನಕ್ಕೆ ಸಲ್ಲುವ ಸಿದ್ಧಾರ್ಥಿ ಸಂವತ್ಸರ ಮಾಘ ಬಹುಳ ೩ ರಲ್ಲು... ಯಲ್ಲು ಚವುಡಪ್ಪನಾಯಕನಿಗೆ ಪಟ್ಟಾಭಿಷೇಕವಾಗಿ, ಕೆಳದಿ, ಇಕ್ಕೇರಿ ಮೊದಲಾದ ಎಂಟು ಮಾಗಣೆ ರಹಿತರು ಕಾಣಿಕೆಯನ್ನು ಕೊಟ್ಟು ಅವರಿಗೆ ಮಾನಿಸಿ, ಮುಖಸ್ಥರಿಗೆ ರಾಯಸ ಮುಂತಾದ್ದು ಬರೆಸಿ

ಕೊಟ್ಟು ಉಡುಗೊರೆಯನ್ನು ಕಳುಹಿಸಿ, ರಾಜ್ಯಭಾರ ಮಾಡುತ್ತಾ ರಾಮೇಶ್ವರ ದೇವರಿಗೆ ಶಿಲಾಮಯ ದೇವಸ್ಥಾನವನ್ನು ಗರ್ಭಗುಡಿಯನ್ನು ಕಟ್ಟಿಸಿ, ಈ ದೇವರಿಗೆ ಹಳೆಬೈಲು ಗ್ರಾಮ ಮುಂತಾದುದು ಶಿವಾರ್ಪಿತವನ್ನು ಮಾಡಿ ಸಂತೋಷದಲ್ಲಿ ಇರುವಂಥಾ ಕಾಲದಲ್ಲಿ, ಒಂದು ದಿವಸ ಸತಿಸಹಿತವಾಗಿ ಇಕ್ಕೇರಿಗೆ ಸವಾರಿ ಬಂದು ಇದ್ದಲ್ಲಿ, ಅಲ್ಲಿ ಮೊಲವು ನಾಯಿಗೆ ಕಚ್ಚಿದುದರಿಂದ ಆಶ್ಚರ್ಯವನ್ನು ನೋಡಿ— ಈ ಭೂಮಿ ಗಂಡು ಭೂಮಿ. ಇದರಲ್ಲಿ ಒಂದು ಕೋಟೆಯನ್ನು ಕಟ್ಟಬೇಕೆಂದು ನಿಶ್ಚಯಿಸಿ, ಇದರಲ್ಲಿ ಒಂದು ಅರಮನೆಯನ್ನು ಕಟ್ಟಿಸಿ, ಇದರಲ್ಲಿ ಕಾವಲು, ಕಡ್ಡಿಲು, ಉಕ್ಕಡ, ಪೇಟೆ, ಕಂದಕ ಮುಂತಾದುದು ಶಾಸ್ತ್ರಪ್ರಕಾರಕ್ಕೆ ಪಟ್ಟಣವಂ ಮಾಡಿಸಿ, ಸುಮುಹೂರ್ತದಲ್ಲಿ, ತಮ್ಮ ಭದ್ರಪ್ಪನಾಯಕನ ಮಗ ಸದಾಶಿವನಾಯಕನ ಕುಟುಂಬ ಸಹಿತ, ಕೆಳದಿ ಅರಮನೆಯನ್ನು ಬಿಟ್ಟು, ಇಕ್ಕೇರಿಯಲ್ಲಿದ್ದ ಅರಮನೆಗೆ ಬಂದು ರಾಜ್ಯಭಾರ ಮಾಡುತ್ತಾ ಇದ್ದರು. ರಾಯರ ದಯಕ್ಕೆ ಪಾತ್ರರಾಗಿ ಒಳಗೆ ಬರೆಸಿದ ಸಿದ್ಧಾರ್ಥಿ ಸಂವತ್ಸರದ ಮಾಘ ಬಹುಳ ೩ ಆರಭ್ಯ ಶ್ರೀಮುಖ ಸಂವತ್ಸರದ ಶ್ರಾವಣ ಶುದ್ಧ ೨ ವರೆಗೆ ವರ್ಷ ೧೩, ತಿಂಗಳು ೬ ವರೆಗೆ ಇದ್ದು ರಾಜ್ಯಭಾರವಂ ಮಾಡಿ ಶಿವಾಧೀನವಾದರು. ||೧||

೪

ಈತನ ಮಗ ಸದಾಶಿವನಾಯಕನು ಇಕ್ಕೇರಿ ಅರಮನೆಯಲ್ಲಿ ರಾಜ್ಯಭಾರ ಮಾಡಿದ ವಿವರ:— ಸದಾಶಿವನಾಯಕರು ಧರ್ಮದಲ್ಲಿ ರಾಜ್ಯಭಾರ ಮಾಡುತ್ತಾ ಇದ್ದಲ್ಲಿ, ಆತನಿಗೆ ಕೆಲವು ದಿವಸದ ಮೇಲೆ ಸಂಕಣ್ಣನಾಯಕನೆಂಬ ಮತ್ತೊಬ್ಬ ಮಗನಿಗೆ (?) ಇಬ್ಬರು ಮಕ್ಕಳು ಹುಟ್ಟಿದರು. ಅವರಿಗೆ ಯವ್ವನ ಬರುತ್ತಲೇ ಜನವೊಂದಕ್ಕೆ ಎರಡು ಜನರ ಮೇರೆಗೆ ಹೆಂಡಿರು ಮದಿವೆ ಮಾಡಿ ಸುಖದಲ್ಲಿ ಇರುವ ಸಮಯದಲ್ಲಿ, ವಿಜಯನಗರದಿಂದಲು ಕೃಷ್ಣರಾಯರು ಈ ದೇಶಕ್ಕೆ ಜಮಿಯತ್ತು ಸಹ ಸವಾರಿ ಬರುವಾಗ್ಗೆ ಸದಾಶಿವನಾಯಕರು ಎದುರುಕೊಂಡು ಕಾಣಿಕೆ ಕೊಟ್ಟಲ್ಲಿ, ನೀನು ಪುಣ್ಯವಂತನು ಇದ್ದೀ. ನಮಗೆ ಆಗದಂಥಾ ಗನೀಬರ ಗರ್ವವನ್ನು ನಿಗ್ರಹಮಾಡುವ ಬಗ್ಗೆ ಈತನ ಸಂಗಡ ಫೌಜು ಕೊಟ್ಟು ಕಳುಹಿಸಿದುದರಿಂದ ನಾವು ಬರುವುದರೊಳಗೆ ಕಲ್ಯಾಣ, ಕಲ್ಲುಬುರುಗೆ ಕೋಟೆಗಳ ಹಲ್ಲಾಮಾಡುಯೆಂಬದಾಗಿ ನೇಮಕ ಮಾಡಿದುದರಿಂದ, ಸೈನ್ಯ ಸಹಿತ ಆ ಗನಿಮ್ಮರ ದೇಶಕ್ಕೆ ಹೋಗಿ ಸವಾರಿ ಮಾಡುತ್ತಾ ಇದ್ದಲ್ಲಿ, ತಾವು ಮುಖಿ ಅಮದಾನಗರದ ಬಿಯರಾಣ [ಭಯ] ನಿಜಾಮ ಪಾದಷಹಾನ



ಅನುಮತಿಯಿಂದ ಫಿರೋಜಖಾನ್, ಕುಳಾಸಖಾನ್, ಸಂಜನಖಾನ್, ಶೋತರಸಿಂಗ್, ಮುಂತಾದ ಪರಾಕ್ರಮಶಾಲಿಗಳು ಒಂದಾಗಿ ಅಪರಿಮಿತ ಸೈನ್ಯ ಸಹ ಬಂದು ಜಮಾಬಂದಿ ಸ್ಥಳದಲ್ಲಿ ಬರುವ ಮಾನ್ಯ (ಸೈನ್ಯ?) ವನ್ನು ಕಟ್ಟಿ ಎರಡು ಸೈನ್ಯಕ್ಕೂ ಯುದ್ಧವಾಗುವಲ್ಲಿ, ರಾಯರ ಕಡೆ ಫೌಜು ನಿರ್ವಾಹ ಮಾಡದೆ ಹಿಮ್ಮೆಟ್ಟಿ ಓಡಿ ಹೋದವು. ಸದಾಶಿವನಾಯಕರು ಸೈನ್ಯವನ್ನು ಹೊಕ್ಕು ಯುದ್ಧ ಮಾಡುವಲ್ಲಿ, ಕುಬಿರಸಿಂಗನು ಇದಿರಿಗೆ ನಿಂತು ಸದಾಶಿವನಾಯಕನು ಕೊಟ್ಟ ಶಿಲಾಭತ್ತ್ರರವನ್ನು ಹರಿಯುವಂತೆ ಹೊಡೆದಲ್ಲಿ, ಈತನು ಮಹಾ ಧೈರ್ಯದಿಂದ ತನ್ನ ಸೈನ್ಯವನ್ನು ಕೂಡಿಕೊಂಡು ಕಯಿಗವಿಸುವಾಗ್ಗೆ, ಮೇಲಾದ ವಜೀರರು ತಮ್ಮ ಸೈನ್ಯದಿಂದ ಎಂಟು ದಿಕ್ಕಿನಲ್ಲಿ ಮುತ್ತಿ ಯುದ್ಧ ಮಾಡಿದಲ್ಲಿ, ಸದಾಶಿವನಾಯಕನು ಯಾವತ್ತು ಸೈನ್ಯವನ್ನು ಹೊಡೆದು ಜಯಪ್ರದ ಮಾಡಿಕೊಂಡು ಈತರಸಿಂಗನಾಯಕ ಈ ಪಾತ್ರದಲ್ಲು ಹಿಡಿದು ತಂದು ರಾಯರಿಗೆ ಒಪ್ಪಿಸಿದರಿಂದ ರಾಯರು ಬಹಳ ಸಂತೋಷಪಟ್ಟು ಉಡುಗೊರೆಯನ್ನು ಕೊಟ್ಟಂಥಾದ್ದು ತೆಗೆದುಕೊಂಡು ಬದುಲಾಗಿ (ಬರಲಾಗಿ?) ಅಲ್ಲಿಂಗ ಕಲ್ಲುಬುರುಗೆಯವರು ಮಲೆತು ಇದ್ದುದರಿಂದ ಅವರನ್ನು ನಿಗ್ರಹಮಾಡುವಂತೆ ತಮ್ಮ ಕಡೆ ಸಾಮಾಜಿಕರಿಗೆ ಅಪ್ಪಣೆ ಕೊಟ್ಟು ಇದ್ದುದರಿಂದ ಅವರು ನಮಗೆ ಅಸಾಧ್ಯವೆಂದು ಹೇಳಿದ ಕಾರಣ,— ಈ ಸದಾಶಿವನಾಯಕನು ಅವರು ಕೊಟ್ಟಂಥಾ ಕಠಾರಿಯನ್ನು ತೆಗೆದುಕೊಂಡು ಫೌಜು ಸಹಿತ ಕಲ್ಲುಬುರುಗೆ ಕೋಟೆಯನ್ನು ಒಂದು ಮುಹೂರ್ತದಲ್ಲಿ ಹಲ್ಲಾ ಮಾಡಿ ತೆಗೆದುಕೊಂಡು, ಆ ತರುವಾಯ ರಾಯರ ಕಾಣಿಸಿಕೊಂಡಲ್ಲಿ ಬಿರುದುಕೊಟ್ಟು ಪಾದಶಹಾನ ಮೇಲೆ ಲಡಾಯಕ್ಕೆ ಹೋಗಬೇಕು ಎಂತ ಅಪ್ಪಣೆ ಕೊಟ್ಟು ಕಳುಹಿಸಿದ್ದರಿಂದ, ಈ ಸದಾಶಿವರಾಯನು ಫೌಜು ಸಮೇತವಾಗಿ ಆತನ ರಾಜ್ಯಕ್ಕೆ ಹೋಗಿ ಸವಾರಿಯನ್ನು ಮಾಡುವಾಗ್ಗೆ ಈ ಸುದ್ದಿಯನ್ನು ಕೇಳಿ ಜಬರಪಾದಶಹನು ತನ್ನ ಫೌಜುಯುಕ್ತವಾಗಿ ಯುದ್ಧಕ್ಕೆ ಬಂದುನಿಂತು ಯುದ್ಧವಾಗುವಲ್ಲಿ, ನಾಲ್ಕು ದಿಕ್ಕಿನಲ್ಲೂ ಮುತ್ತಿದಂಥಾ ಫೌಜು ಹೊಡೆದು ಪಾದಶಹಾ ಹತ್ತಿ ಇದ್ದಂಥಾ ಆನೆಯ ಇದಿರಿಗೆ ಹೋಗಿ ನಿಂತು ಆನೆಯ ಸೊಂಡಿಲನ್ನು ಕತ್ತರಿಸಿ ಕೊಂಬಿನ ಮೇಲೆ ಹತ್ತಿ ಪಾದಶಹಾಗೆ ಯುದ್ಧವನ್ನು ಕೊಡುವಾಗ್ಗೆ ಅರಸಿನ ಮೇಲೆ ಬಂದನೆಂದು ಅವರ ಕಡೆಯಿಂದ ಯಾವತ್ತು ಸೈನ್ಯವು

ಬಂದು ಮುಸುಕಿದಲ್ಲಿ ಆನೆಯನ್ನು ಬಿಟ್ಟು ಮುಸುಕಿದಂಥಾ ಸೈನ್ಯದ ಮಧ್ಯದಲ್ಲಿ ನಿಂತು ಯಾವತ್ತು ಸೈನ್ಯವನ್ನು ನಿರ್ವಹಿಸಿ ಪಲಾಯನವನ್ನು ಮಾಡಿ ಇದ್ದುದರಿಂದ ಕೈಗೆ ಸಿಕ್ಕಿದ ಜನರು ಆಯುಧವನ್ನು ಒಪ್ಪಿಸಿ ಪಾದಾಕ್ರಾಂತರಾದರು. ಕೈಸೆರೆ ಸಿಕ್ಕಿದಂಥ ಜನರನ್ನು ಒಪ್ಪಿಸಿ ವಜೀರರು ಸತ್ತಿಗೆ ನಿಶಾನಿ ಮೊಹರ ಅಂಬಾರಿ ಯುಕ್ತವಾಗಿ ಸಹಿತ ಬಿರುದು (ಬರೀದ?) ಪಾದಶಹಾನ(ನ್ನು) ಕೈಸೆರೆ ಹಿಡತಂದು ರಾಯರಿಗೆ ಒಪ್ಪಿಸಿದಲ್ಲಿ, ಕೃಷ್ಣರಾಯರು ನೋಡಿ ಸಂತೋಷವಂಬಟ್ಟು, ಮನೋಹರವಾದ ನವರತ್ನದ ಆಭರಣ ತಾಂಬೂಲ ಸಹ ಕೊಟ್ಟು ಮನ್ನಿಸಿ, ಹಗಲು ದೀವಟಿಗೆ ಮುಂತಾದ ಬಿರುದುಗಳ ಕೊಟ್ಟು, ಪಾದಶಹಾನ ಮೊಹರವನ್ನು ಈತನ ಬೆರಳಿಗೆ ಇಟ್ಟು, ಸಪ್ತಾಂಗಹರಣ ಸದಾಶಿವನಾಯಕನೆಂಬ ಹೆಸರನ್ನು ಮನ್ನಿಸಿದರು. ವಿಶೇಷ ಪ್ರೀತಿಗೆ ಪಾತ್ರನಾಗಿದ್ದನು. ಪುನಃ ಅಮ್ಮದಾನಗರದ ನಿಜಾಮಪಾದಶಹಾನ ಗರ್ವವನ್ನು ಮುರಿದು ಓಡಿಸಿದನು. ಮತ್ತು ಕೃಷ್ಣರಾಯರು ಸಂತೋಷಪಟ್ಟು ಏಕಾಂಗವೀರನೆಂಬ ಬಿರುದನ್ನು ಕೊಟ್ಟರು. ಆ ತರುವಾಯ ಸದಾಶಿವನಾಯಕನು ಇರಲಾಗಿ ಚಂದ್ರಗುತ್ತಿ ಕೋಟೆಯಲ್ಲಿ ಸಾಳಪ್ಪನಾಯಕಯೆಂಬವನು ಪ್ರಬಲನಾಗಿ ರಾಯರಿಗೆ ಅಸದಳವಾಗಿ ಇದ್ದಕಾರಣ, ಸದಾಶಿವನಾಯಕನಿಗೆ ಅಪ್ಪಣೆಕೊಟ್ಟಲ್ಲಿ, ಕೆಲವು ಸೈನ್ಯಸಹಿತ ಬಂದು ಕೋಟೆಯನ್ನು ಹಲ್ಲಾ ಮಾಡಿ, ಸಾಳಪ್ಪನಾಯಕನನ್ನು ಕೈಸೆರೆ ಹಿಡಿದು ರಾಯರಿಗೆ ಒಪ್ಪಿಸಿದನು. ಆ ತರುವಾಯ ಮದಗದ ಕೆರೆ ಕೆಲಸವನ್ನು ಪೂರಾ ಕಟ್ಟಿಸಿ, ಶೃಂಗೇರಿಯಿಂದ ಸ್ವಾಮಿಗಳವರನ್ನು ಕರೆದುಕೊಂಡು ಬಂದು, ಕೆರೆ ಸಮೀಪದಲ್ಲಿ ರಾಯರಿಗೆ ಭೇಟಿಯನ್ನು ಮಾಡಿಸಿ ಯಿಳಯ (ಇಳೆಯ?) ಮುಖದಿಂದ ಬಹಳ ಬಹುಮಾನವನ್ನು ಪಡೆದು ಇರುತ್ತಾ ಇದ್ದನು. ಆಮೇಲೆ ರಾಯರ ಕೈಕೆಳಗೆ ಇದ್ದ ತಿಮ್ಮ ಯೆಂಬವನು ದುರಹಂಕಾರದಿಂದ ಗರ್ವಿಸಿ ಇದ್ದುದರಿಂದ ಆವನಿಗೆ ನಿಗ್ರಹಿಸಿ ಮತ್ತೂ ರಾಯರ ದಯಕ್ಕೆ ಪಾತ್ರನಾದನು. ಆ ಮೇಲೆ ರಾಯರ ಅಪ್ಪಣೆ ಪ್ರಕಾರಕ್ಕೆ ಘಟ್ಟದ ಕೆಳಗೆ ಹೋಗಿ ಅಲ್ಲಿ ತುಳುವ ರಾಜ್ಯದ ಪಾಳೆಗಾರಗೆ ನಿಗ್ರಹಿಸಿ, ಕಾಸರಗೋಡು ಪರ್ಯಂತರ ರಾಜ್ಯವನ್ನು ಸಂಪಾದಿಸಿಕೊಂಡು, ಕಾಸರಗೋಡು ಗಡೀಕಂಭವನ್ನು ನಿಲ್ಲಿಸಿ, ಪುನಃ ರಾಯರ ಭೇಟಿಯನ್ನು ಮಾಡಿ ಅಪ್ಪಣೆಯನ್ನು ತೆಗೆದುಕೊಂಡು ಇಕ್ಕೇರಿಯಲ್ಲಿದ್ದ



ಅರಮನೆಗೆ ಬಂದು ಧರ್ಮದಿಂದ ರಾಜ್ಯವಾಳುತ್ತಾ ಇದ್ದನು. ಆ ತರುವಾಯ ಕೆಳದಿಯಲ್ಲಿದ್ದ ರಾಮೇಶ್ವರ ದೇವರ ಗುಡಿಯನ್ನೂ ಶಿಲ್ಪಶಾಸ್ತ್ರ ಯುಕ್ತವಾಗಿ ನಂದೀಮಂಟಪವನ್ನೂ ಶಿಲಾಮಯದಿಂದ ಕಟ್ಟಿಸಿದನು. ಈ ರಾಮೇಶ್ವರ ದೇವರ ಎಡದ ಭಾಗದಲ್ಲಿ ಪಾರ್ವತಾಮ್ಮನವರನ್ನು ಪ್ರತಿಷ್ಠೆ ಮಾಡಿಸಿ, ಈ ದೇವರಿಗೆ ಬಹಳವಾಗಿ ಭೂಮಿಯನ್ನು ಧಾರೆಯೆರದು ಬಹಳ ಭಕ್ತಿಯಿಂದ ನಡೆದುಕೊಂಡು ಇರಲಾಗಿ, ಆರುಗದ ಕೃಷ್ಣಾನದೀ ತೀರದಲ್ಲಿ ಸದಾಶಿವಪುರವೆಂಬ ಹೆಸರಿಟ್ಟು ಅಗ್ರಹಾರವನ್ನು ನಿರ್ಮಾಣವಂ ಮಾಡಿಸಿ. ಬ್ರಾಹ್ಮಣರಿಗೆ ವೃತ್ತಿ ಕ್ಷೇತ್ರವನ್ನು ಧಾರೆಯೆರೆದು ಕೊಟ್ಟು, ಶಿಲಾಶಾಸನವನ್ನು ಬರೆಸಿಕೊಟ್ಟು, ಅಗ್ರಹಾರದಲ್ಲಿ ಲಿಂಗ ಪ್ರತಿಷ್ಠೆಯನ್ನು ಮಾಡಿಸಿ. ಸದಾಶಿವೇಶ್ವರಯೆಂದು ಹೆಸರಿಟ್ಟು ರಚಿಸಿ, ದೇವಾಲಯವನ್ನು ಕಟ್ಟಿಸಿ, ದೇವತಾ ಸೇವೆಗೆ ಭೂಮಿಯನ್ನು ಧಾರೆಯೆರೆದು, ಸತ್ಯಧರ್ಮದಲ್ಲಿ ರಾಜ್ಯಪರಿಪಾಲನೆಯಂ ಮಾಡಿಕೊಂಡು ಇದ್ದರು. ಶ್ರೀಮುಖ ಸಂವತ್ಸರ ಶ್ರಾವಣ ಶುದ್ಧ ೪ ಆರಭ್ಯ ವಿಶ್ವಾವಸು ಸಂವತ್ಸರ ಕಾರ್ತಿಕ ಶುದ್ಧ ೪ ರವರೆಗಿನ ವರ್ಷ ೩೧ ತಿಂಗಳು ೬ ಪರ್ಯಂತರ ಇದ್ದು ಜಿತುಪಾಕ್ಯಯೆಂಬ ಸ್ಥಳದಲ್ಲಿ ದೇಹಬಿಟ್ಟನು. ಸಮಾಧಿ ಅಲ್ಲಿ ಆಯಿತು.

(೫)

ಈ ಸದಾಶಿವ ನಾಯಕನ ಮಗ ದೊಡ್ಡ ಸಂಕಣ್ಣನಾಯಕನಿಗೆ ಪಟ್ಟವಾಗಿ ರಾಜ್ಯವನ್ನಾಳುತ್ತ ಇದ್ದಲ್ಲಿ, ಜಂಬೂರು ಈರಣ್ಣವಡೆಯರ ನಾಮುದ್ರಿರು (?) ಇದ್ದ ವರ್ತಮಾನ ರಾಯರು ಕೇಳಿ, ರಾಯನ ಈತನಿಗೆ ಕಳುಹಿಸಿ ಇದ್ದುದರಿಂದ, ಈತನು ತನ್ನ (ತಮ್ಮ) ಚಿಕ್ಕ ಸಂಕಣ್ಣನಾಯಕನ [ನ್ನು] ರಾಜ್ಯಭಾರಕ್ಕೆ ಇಟ್ಟು, ತಾನು ಕುಟುಂಬ ಸಹ ಹೋಗಿ ರಾಯರ ಕಾಣಿಸಿಕೊಂಡಲ್ಲಿ,— ಜಂಬೂರು ಈರಣ್ಣ ವಡೆಯರ [ನ್ನು] ಕೊಂದ ಕಾರಣ ನೀನು ಹುಜೂರಲ್ಲಿರು— ಎಂಬದಾಗಿ ನೇಮಿಸಿ ಇದ್ದದ್ದರಿಂದ, ಅಲ್ಲಿ ರಾಜ ಕಾರ್ಯಕ್ಕೆ ಸಾನುಕೂಲವಾಗಿ ಇರುತ್ತಾ ಇದ್ದಲ್ಲಿ, ಕೆಲವು ದಿವಸದ ಮೇಲೆ ಈ ಸಂಕಣ್ಣನಾಯಕನಿಗೆ ಇಬ್ಬರು ಮಕ್ಕಳು ಹುಟ್ಟಿದರು. ಹಿರೇ ಮಗನಿಗೆ ರಾಮರಾಯ ನಾಯಕನೆಂದು ಹೆಸರಿಟ್ಟು ಪೋಷಣೆಯನ್ನು ಮಾಡುತ್ತ, ಕೆಲವು ದಿವಸದ ಮೇಲೆ ರಾಮರಾಯರ ಬಳಿಗೆ ಇಬ್ಬರು ಮಕ್ಕಳನ್ನು ಕರೆದುಕೊಂಡು

ಹೋಗಿ ಕಾಣಿಸಿ ಇದ್ದಲ್ಲಿ, ಈ ಮಕ್ಕಳ ಸುಲಕ್ಷಣವನ್ನು ನೋಡಿ ಸಂತೋಷಪಟ್ಟು ಸದಾಶಿವನಾಯಕನ ಮೊಮ್ಮಕ್ಕಳು ಎಂಬ ವಾತ್ಸಲ್ಯದಿಂದ ಕುಮಾರರಿಗೆ ಹಾಲು ಬೆಣ್ಣೆಯ ಬಗ್ಗೆ ಉಂಬಳಿ ಮಾಸೂರು, ಹೊಳೆಹೊನ್ನೂರು ಸಹ ಕೊಟ್ಟು ಮನ್ನಿಸಿದರು. ಆ ತರುವಾಯ ಸಂಕಣ್ಣನಾಯಕನು [ಸ್ವ] ಸ್ಥಳಕ್ಕೆ ಬಂದು ಇರುತ್ತಾ ಇದ್ದಲ್ಲಿ, ಮಕ್ಕಳಿಗೆ ಯವ್ವನ ಬರುತ್ತಲೇ ಮದಿವೆಯನ್ನು ಮಾಡಿ, ವಿದ್ಯಾಭ್ಯಾಸವನ್ನು ಕಲಿಸಿ, ಬೊಕ್ಕಸ ಭಂಡಾರವನ್ನು ದೊರೆತ ಸವ ಗುಟ್ಟು ಸ್ಥಳವನ್ನು ಹೇಳಿ, ತಾನು ದೇಶಸಂಚಾರ ಮಾಡಬೇಕೆಂಬ ಅಪೇಕ್ಷೆಯಿಂದ ತನ್ನ ತಮ್ಮ ಚಿಕ್ಕ ಸಂಕಣ್ಣನಾಯಕನ[ನ್ನು] ರಾಜ್ಯಭಾರಕ್ಕೆ ಇರಿಸಿ. ಮಕ್ಕಳನ್ನು ತಮ್ಮನ ವಶಕ್ಕೆ ಕೊಟ್ಟು, ತಾನು ಸಾನು [ನಾಲ್ಕು?] ಜನ ಊಳಿಗದಕರ [ನ್ನು] ಕರಕೊಂಡು ಊರು ಬಿಟ್ಟು ಹೊರಟು, ದಕ್ಷಿಣ ದಿಕ್ಕಿಗೆ ತನ್ನ ದೇಶವನ್ನು ದಾಟಿ, ಗ್ರಾಮೈಕ ರಾತ್ರಿ ವಾಸವಾಗಿದ್ದು ಅನಾವ ದೇಶದಲ್ಲಿರುವ ಪುಣ್ಯಕ್ಷೇತ್ರಗಳಲ್ಲಿರುವ ದೇವತಾದರ್ಶನ ತೀರ್ಥಸ್ನಾನವನ್ನು ಮಾಡುತ್ತಾ, ಪ್ರೌಢಜನರ ಸಹವಾಸವನ್ನು ಮಾಡುತ್ತಾ, ಶಿವಗಂಗೆಗೆ ಹೋಗಿ, ಅಲ್ಲಿಂದ ಕಂಚೀಪಟ್ಟಣ ಚಿದಂಬರ ದರ್ಶನವನ್ನು ಮಾಡಿ, ಅಲ್ಲಿಂದ ಮಾಯೂರಿಗೆ ಹೋಗಿ, ಬೆತ್ತಾಳ ಪಟ್ಟಣ (?) ವನ್ನು ಹೊಕ್ಕು, ರಾಮೇಶ್ವರಕ್ಕೆ ಹೋಗಿ ಸೇತುಸಮುದ್ರ ಸ್ನಾನವನ್ನು ಮಾಡಿ, ಅಲ್ಲಿ ಒಂದು ತಿಂಗಳು ಇದ್ದು, ಅಲ್ಲಿಂದ ಉತ್ತರವಾಗಿ ಬಗೆ ಬಗೆ ದೇಶಗಳನ್ನು ನೋಡುತ್ತಾ, ಬಿಜಾಪುರ, ಭಾಗಾನಗರ, ಅಮ್ಮದಾನಗರ ಮುಂತಾದ್ದು ಹೊಕ್ಕು ನೋಡಿ, ಅಲ್ಲಿಯೂ ಬಹಳ ಸಂತೋಷಪಟ್ಟು, ಡಿಲ್ಲಿಯಲ್ಲಿರುವ ಪಾದಶಹನ ರಾಜದ್ವಾರಕ್ಕೆ ಕಟ್ಟಿ ಇರುವ ಬಿರುದುಗಳ[ನ್ನು] ನೋಡಿ ಆಶ್ಚರ್ಯವಂಬಟ್ಟು ಶಿರಃ ಕಂಪನವಂ ಮಾಡಿ, ಬಾಗಲಲ್ಲಿರುವ ಕಾವಲರನ್ನು ಕರೆದು—'ರಾಜದ್ವಾರಕ್ಕೆ ಕತ್ತಿ ಕಟ್ಟಿರುವ ಕಾರಣವೇನು?' ಎಂಬದಾಗಿ ಕೇಳಿದಲ್ಲಿ, ಅವರು ಹೇಳಿದ ವಿವರಃ— ಅಂಕುಶಾಖಾನನೆಂಬ ವಜೀರನ ಸಂಗಡ ಯುದ್ಧಕ್ಕೆ ನಿಲ್ಲುವಂಥವರು ಯಾರೂ ಇಲ್ಲ. ಅಥವಾ ಅಂಕುಶಾಖಾನನ ಎದುರಾಗಿ ಯುದ್ಧವನ್ನು ಮಾಡುವಂಥವರು ಇದ್ದರೆ ಈ ಕತ್ತಿ ಬಿಚ್ಚಿಸುತ್ತಾರೆ'— ಎಂತ ಹೇಳಿದ ಮಾತು ಕೇಳಿದ್ದರಿಂದ, ಈ ಸಂಕಣ್ಣನಾಯಕನು ಆಶ್ಚರ್ಯವಂಬಟ್ಟು, 'ಅಂಥಾ ಪರಾಕ್ರಮಶಾಲಿಯಾಗಿದ್ದರೆ ನೋಡುವ, ಕತ್ತಿ ಬಿಚ್ಚಿ'— ಯೆಂಬದಾಗಿ ಹೇಳಿದ್ದರಿಂದ, ಆ ಕಾವ



ಲವರು ಕತ್ತಿಯನ್ನು ಬಿಚ್ಚಿ,—'ನೀನು ಯಾರು? ಯಾವ ಸ್ಥಳದಿಂದ ಬಂದೆ?—' ಎಂಬದಾಗಿ ವಿಚಾರಿಸುವಾಗ್ಗೆ, ಈ ಸಂಕಣ್ಣನಾಯಕನು,— 'ನಾವು ಜಂಗಮರು, 'ಏಕರಾತ್ರ ವಾಸವಾಗಿರುವಂಥಾವನಿಗೆ ಸ್ಥಳ ವಾವುದು? ಊರು ಯಾವುದು?'—ಎಂಬದಾಗಿ ಹೇಳಿದಲ್ಲಿ. ಈ ವರ್ತಮಾನವನ್ನು ಪಾದಶಹನಿಗೆ ಚಾರರು ಹೋಗಿ ಹೇಳಿದ್ದರಿಂದ ಆಶ್ಚರ್ಯವಂಬಟ್ಟು, ಈ ಸಂಕಣ್ಣನಾಯಕನನ್ನು ಸಮೀಪಕ್ಕೆ ಕರೆಸಿ, ವಿಚಾರಿಸಿ, ಈತನಿಗೆ ಪ್ರತ್ಯೇಕ ಬಿಡಾರವನ್ನು ಕೊಡಿಸಿ ಕೊಟ್ಟು, ಬೇಕಾದ ಸಾಸುಕೂಲಮಾಡಿಸಿಕೊಟ್ಟು, ಆ ತರುವಾಯ ವಜೀರ ಅಂಕುಶಾಖಾನನ[ನು] ಕರೆಸುವಾಗ್ಗೆ, ರಾಜದ್ವಾರವನ್ನು ನೋಡಿ—'ಕತ್ತಿ ಬಿಚ್ಚಿದವರು ಯಾರು?—ಎಂದು, ಬಹಳ ಕೋಪದಿಂದ ಪಾದಶಹನ ಬಳಿಗೆ ಹೋಗಿ ಹೇಳಿದಲ್ಲಿ. ಸಂಕಣ್ಣನಾಯಕನನ್ನು ತೋರಿಸಿದ್ದರಿಂದ, ವಜೀರನು ಕೈಯಲ್ಲಿ ಖಡ್ಗವನ್ನು ತೆಗೆದುಕೊಂಡು ಯುದ್ಧಕ್ಕೆ ನಿಂತಲ್ಲಿ, 'ಯಾವತ್ತು ಸಭೆಯನ್ನು ಕೂಡಿಸುತ್ತೇವೆ. ಇಬ್ಬರೂ ಊಟಮಾಡಿಕೊಂಡು ಬನ್ನಿ'—ಯೆಂಬದಾಗಿ ಪಾದಶಹನು ಹೇಳಿದ್ದರಿಂದ. ಆ ತರುವಾಯ ಇಬ್ಬರೂ ಊಟಮಾಡಿಕೊಂಡು, ಅಲಂಕಾರ ಯುಕ್ತರಾಗಿ ಬಂದು ಪಾದಶಹಾನ ಮುಂದೆ ಅಂಕುಶಾಖಾನನು ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ಬಂದು ಯುದ್ಧಕ್ಕೆ ನಿಲ್ಲುವಾಗ, ಸಂಕಣ್ಣನಾಯಕನು ಬರೀ ಕೈಲಿ ಇದ್ದುದರಿಂದ, ಪಾದಶಹಾನು ನೋಡಿ, ಉತ್ತಮವಾದ ಕತ್ತಿಯನ್ನು ತರಿಸಿ ಕೊಡುವಾಗ್ಗೆ ಆ ಕತ್ತಿಯನ್ನು ಹಿಡಿದು, ಝಳಪಿಸುವಾಗ್ಗೆ ಆ ಕತ್ತಿಯು ತುಂಡು ಆದದರಿಂದ, ಬದಲು ಕತ್ತಿಯನ್ನು ತರಿಸಿ ಕೊಡುವಲ್ಲಿ ಆ ಕತ್ತಿಯೂ ಮುರಿದು ಹೋದದರಿಂದ ಪಾದಶಹನು ಆಶ್ಚರ್ಯವಂಬಟ್ಟು ತನ್ನ ಪಟ್ಟದ ಕತ್ತಿಯನ್ನು ಕೊಡಬೇಕು ಎಂತ ಯೋಚಿಸಿ ಇದ್ದಲ್ಲಿ, ಕತ್ತಿಯನ್ನು ತೆಗೆಯುವಾಗ್ಗೆ ಈ ಕತ್ತಿ ಕೂಡೆ ಯುದ್ಧವು ಇಲ್ಲದ್ದರಿಂದ ಸಂಕಣ್ಣನಾಯಕನು ಬೇಡವೆಂಬದಾಗಿ ಹೇಳಿ ತನ್ನ ಸೊಂಟದಲ್ಲಿ ಸುತ್ತಿದ ನಾಗರಮುರಿ ಎಂಬ ಕತ್ತಿಯನ್ನು ಕೈಯಲ್ಲಿ ತೆಗೆದುಕೊಂಡು ಝಳಪಿಸಿ, ಕಾಳಗಕ್ಕೆ ಸಮನಾಗಿ ನಿಲ್ಲು ಯೆಂಬದಾಗಿ ಅಂಕುಶಖಾನನನ್ನು ವಿಚಾರಿಸಿ, ತಾನು ಯುದ್ಧಕ್ಕೆ ನಿಂತನು. ಒಂದು ಜಾವಪರ್ಯಂತರಕ್ಕೂ ನಾನಾಪ್ರಕಾರಕ್ಕೆ ಯುದ್ಧಮಾಡಲಾಗಿ ಸಂಕಣ್ಣನಾಯಕನ ಮುಂದೆ ಅಂಕುಶಾಖಾನನ ಪರಾಕ್ರಮವು ನಡೆಯದೆ ಇರುವುದ

ರಿಂದ ಅಂಕುಶಖಾನನನ್ನು ಅನ್ಯೋನ್ಯ ಯುದ್ಧ ಮಾಡು ಯೆಂಬದಾಗಿ
ಹೇಳಿ, ಯುದ್ಧ ಮಾಡಿ ಇದ್ದಲ್ಲಿ, ಅಂಕುಶಖಾನನಿಗೆ ಗಾಯವಾಗಿ
ಈತನಿಗೆ ಲೇಶವೂ ಗಾಯವಾಗದೆ ಇದ್ದದರಿಂದ, ಈ ಸಂಕಣ್ಣನಾಯ
ಕನು ಅಂಕುಶಖಾನನಿಗೆ—ಎಚ್ಚತ್ತು ಯುದ್ಧಮಾಡು ಎಂಬುದಾಗಿ ಹೇಳಿ
ಯುದ್ಧ ಮಾಡುವಲ್ಲಿ, ಅಂಕುಶಖಾನನ ಕೈಯಲಿದ್ದ ಕತ್ತಿಯನ್ನು ಮಧ್ಯೇ
ಖಂಡಿಸಿ ಅವನ ಸೊಂಟಕ್ಕೆ ಹೊಡೆದಲ್ಲಿ, ಯಾವತ್ತು ಸಭೆಗೂ ಹೊಡೆ
ದನೋ ಇಲ್ಲವೋ ಎಂದು ಸೆಪ್ಪೆ ಮೇಲೆ ಕಣ್ಣು ಮಾತ್ರ ಮೆಲ್ಲುಗಣ್ಣು
ಸಿಕ್ಕಿ ಇದ್ದದ್ದರಿಂದ ಪಾದಶಹಾನಿಗೆ ಮಾತ್ರ ತಿಳಿದು, ಸಂಕಣ್ಣನಾಯ
ಕನನ್ನು ನೋಡಿ – ಏತಕ್ಕೆ ಸುಮ್ಮನೆ ನಿಂತೆ? ಯುದ್ಧಮಾಡಿ ಬೇಸ
ತ್ತೆಯೋ ?— ಎಂಬದಾಗಿ ಕೇಳಿದಲ್ಲಿ, 'ಇನ್ನು ಯಾರ ಕೈಲಿ ಯುದ್ಧ
ಮಾಡಬೇಕು?'—ಎಂತ ಕೇಳಿದ[ನು.] 'ನಿನ್ನ ಕಣ್ಣು ಎದುರಿಗೆ ನಿಂತು
ಇರುವವನ ಜಯಿಸು'—ಎಂತ ಹೇಳಿದಲ್ಲಿ, 'ಹೆಣನ ಕೂಡ ಕಾಳಗ ಏನು
ಮಾಡಬೇಕು ?'— ಎಂತ ಹೇಳಿ, ತನ್ನ ಕತ್ತಿಯನ್ನು ಅಂಕುಶಖಾನನ
ಎದೆಗೆ ಮುಟ್ಟಿಸಿ ಇದ್ದಲ್ಲಿ, ಈ ಕ್ಷಣ ಮೇಲಭಾಗವು ನೆಲಕ್ಕೆ ಬಿದ್ದುದರಿಂದ
ಸರ್ವರೂ ಆಶ್ಚರ್ಯವಂಬಟ್ಟು ಸಂಕಣ್ಣನಾಯಕನ ಬಳಿಯಲ್ಲಿದ್ದ ಊಳಿ
ಗದವರನ್ನು ಕರೆಸಿ, ಈತನು ಯಾರು ? ಎಂಬದಾಗಿ ವಿಚಾರಿಸಿ ಇದ್ದಲ್ಲಿ,
ಅವರು ಈತನ ವೃತ್ತಾಂತವಂ ಯಾವತ್ತು ಹೇಳಲಾಗಿ, ಸಂಕಣ್ಣ
ನಾಯಕನ್ನು ಕರೆಸಿ, ಆಲಿಂಗನವಂ ಮಾಡಿಕೊಂಡು, ಮರೆಮಾಚಿದೆ
ಯೆಂದು ಹೇಳಿ ಸದರು ಬಕ್ಷೀಸನ್ನು ಕೊಟ್ಟು, ಹಸುರು ನಿಶಾನೀ ಬಿರು
ದನ್ನು ಕೊಟ್ಟು, ತಾಂಬೂಲವನ್ನು ಕೊಟ್ಟು, ಮಾನಿಸಿ,—'ನಿನಗೆ ಏನು
ಆಗಬೇಕು ? '— ಎಂಬುದಾಗಿ ಕೇಳುವಾಗ್ಗೆ,—'ನನ್ನ ಮನೋಭಿಪ್ರಾಯ
ಜೇರೆಯಿದೆ ಶಾಶ್ವತವಾಗಿ ನಡೆಸಿ ಕೊಡುವುದು ನಿಶ್ಚಯವಾದರೆ
ಹೇಳುವೆನೆಂದು ಹೇಳಿದಲ್ಲಿ ಹೇಳಿದಲ್ಲಿ ಕೇಳಿ ವೃಥಭಾಷೆಯನ್ನು ಕೊಟ್ಟ
ದ್ದರಿಂದ,—'ಕಾಶಿ ಕ್ಷೇತ್ರಕ್ಕೆ ನಾನು ಹೋಗಿ ದಾನ ಧರ್ಮವನ್ನು ಮಾಡಿ
ರಾಷ್ಟ್ರದಲ್ಲಿ ಪ್ರಸಿದ್ಧವಾದ ಸ್ಥಳಗಳಲ್ಲಿ ಮಠವನ್ನು ಕಟ್ಟಿಸಿ ಮಾನ್ಯವನ್ನು
ಕೊಡಿಸಿ, ನಾನು ನನ್ನ ಊರಿಗೆ ಹೋಗಬೇಕು ಎಂದು ಮನಸ್ಸಿನಲ್ಲಿ
ಇದೆ. ಈ ಮೇರೆಗೆ ನಡೆಸಿಕೊಡಬೇಕು'—ಎಂದು ಹೇಳಿದ್ದರಿಂದ, ಅದೇ
ಮೇರೆಗೆ ಆಗಲಿಯೆಂದು ಸಂಗಡ ಊಳಿಗದವರನ್ನು ಕೊಟ್ಟು ದಿಳ್ಳಿಗೆ
ಚಾವಲ್‌ಕೆ ಮಂಡೆ (ಡಿ) ಯೆಂಬ ಸ್ಥಳದಲ್ಲಿ ಮಠವನ್ನು ಕಟ್ಟಿಸಿ,
ಅಲ್ಲಿಂದ ಬಂದು ಪ್ರಯಾಗದಲ್ಲಿ ದಾನಧರ್ಮವನ್ನು ಮಾಡಿ, ಕಾಶಿಗೆ



ಹೋಗಿ ಅಲ್ಲಿಯೂ ದಾನಧರ್ಮವನ್ನು ಮಾಡಿ, ಮಣಿಕರ್ಣಿಕಾ ಘಟ್ಟ
ದಲ್ಲಿ ಸ್ನಾನವನ್ನು ಮಾಡಿ, ವಿಶ್ವೇಶ್ವರ, ಕಾಳಭೈರವ, ಬಿಂದುಮಾಧವ
ಮುಂತಾದ ದೇವತಾ ಸೇವೆಯನ್ನು ಮಾಡಿ, ಕೆಲವು ದಿವಸ ಅಲ್ಲಿ
ವಾಸವಾಗಿ ಇದ್ದು, ಪಂಚಕ್ರೋಶ ಯಾತ್ರೆಯಂ ಮಾಡಿ, ಆ ತರುವಾಯ
ವಾರಣಾಸೀ ತೀರದಲ್ಲಿ ಲಿಂಗ ಪ್ರತಿಷ್ಠೆಯನ್ನು ಮಾಡಿ, ಗಯಾಕ್ಕೆ ಹೋಗಿ,
ಅಲ್ಲಿ ದಾನ ಧರ್ಮವನ್ನು ಮಾಡಿ, ನೇಪಾಳ ದೇಶಕ್ಕೆ ಹೋಗಿ ಶ್ರೀ ನೀಲ
ಕಂಠೇಶ್ವರ ದರ್ಶನವನ್ನು ಮಾಡಿಕೊಂಡು, ಕೇದಾರಕ್ಕೆ ಹೋಗಿ ದೇವರ
ದರ್ಶನವಮಾಡಿ, ಕಾಶ್ಮೀರ ದೇಶಕ್ಕೆ ಹೋಗಿ ಬಂದು ಶಾರದಾಂಬನವರ
ಪೂಜೆಯಂ ಮಾಡಿಕೊಂಡು ಪುಟ್ಟಣ [ಪೈಠಣ] ದೇಶಕ್ಕೆ ಬಂದು ಅಲ್ಲಿ
ದ್ವಾತ್ರಿಂಶ [ತ್] ಕರಂದ ಶೀತಾಪುರ [ಶೋಭಿಸುವ ?] ಅಘೋರೇಶ್ವರ
ದೇವರ ದರ್ಶನವಮಾಡಿಕೊಂಡು, ಆ ದೇವರ ಆಕಾರವನ್ನು ಕಾಗದದಲ್ಲಿ
ಬರೆಸಿಕೊಂಡು, ಹಂಪೆಗೆ ಬಂದು, ಮೈಸೂರು [ಮಾಸೂರು?] ಸೀಮೆಯಲ್ಲಿ
ರುವ ಆಳವಾಳೆ [ಆಲವಳ್ಳಿ] ಯೆಂಬ ಗ್ರಾಮಕ್ಕೆ ಬಂದು ಮಲಗಿಯಿ
ದ್ದಾಗ್ಗೆ, ಅಲ್ಲಿ ಕೆರೆ ಸಮೀಪದಲ್ಲಿದ್ದ ವೀರಭದ್ರ ದೇವರು ಈ ಸಂಕ
ಣ್ಣನಾಯಕನ ಸ್ವಪ್ನದಲ್ಲಿ ಬಂದು—'ನನ್ನನ್ನು ತೆಗೆದುಕೊಂಡು ಹೋಗಿ
ನಿನ್ನ ಊರಲ್ಲಿ ಪ್ರತಿಷ್ಠೆಯನ್ನು ಮಾಡಿ ಪೂಜೆಯನ್ನು ಮಾಡಿಯಿದ್ದಲ್ಲಿ
ನಿನ್ನ ಹೃದಯದಲ್ಲಿದ್ದ ಅಭೀಷ್ಟವನ್ನು ಕೊಡುತ್ತೇನೆ—' ಯೆಂತ ಹೇಳಿ
ದಲ್ಲಿ. ಬೆಳಿಗ್ಗೆ ಆ ಮೂರ್ತಿಯನ್ನು ಸ್ವಾಧೀನಮಾಡಿಕೊಂಡು, ಆ ತರು
ವಾಯ ಕೆಳದಿಗೆ ಬಂದು. ಈಶ್ವರ ದೇವಸ್ಥಾನದ ಬಲದ ದಿಕ್ಕಿನಲ್ಲಿ
ಆಗಮೋಕ್ತದಿಂದ ಈ ದೇವರ ಪ್ರತಿಷ್ಠೆಯನ್ನು ಮಾಡಿಸಿ, ಶಿಲಾಮಯ
ವಾದ ಗರ್ಭಗುಡಿಯನ್ನು ಕಟ್ಟಿಸಿ, ದೇವತಾ ಪೂಜೆಗೆ ಬೇಕಾದಷ್ಟು
ಗ್ರಾಮವನ್ನು ಬಿಟ್ಟು, ಆ ತರುವಾಯ ಇಕ್ಕೇರಿಗೆ ಬಂದು, ಬರೆದು
ತಂದುಯಿದ್ದ ಅಘೋರೇಶ್ವರ ದೇವರ ಆಕಾರಕ್ಕೆ ಶಿಲೆಯಿಂದ ಮೂರ್ತಿ
ನಿರ್ಮಾಣವಂ ಮಾಡಿಸಿ. ಇಕ್ಕೇರಿ ಪಟ್ಟಣದಲ್ಲಿ ಶಾಸ್ತ್ರ ಪ್ರಕಾರದಿಂದ
ಪ್ರತಿಷ್ಠೆಯನ್ನು ಮಾಡಿಸಿದನು. ದೇವತಾ ಸೇವೆ ನಡೆಯುವ ಬಗ್ಗೆ
ಹೇರಳವಾಗಿ ಸೀಮೆಯನ್ನು ಬಿಟ್ಟು ಶಿಲಾಮಯ ದೇವಸ್ಥಾನವನ್ನು
ಕಟ್ಟಿಸಿ ತಟಾಕ ತೋಟ ಮುಂತಾದ್ದು ಮಾಡಿಸಿ, ರಾಜ್ಯಪರಿಪಾಲನೆ
ಮಾಡಿಕೊಂಡು ಇರಲಾಗಿ, ಇತ್ತಲಿಂದ ರಾಮರಾಯರಿಗೆ ಮಲೆತು
ಇದ್ದಂಥಾ ತುರುಕರ ಗರ್ವವನ್ನು ಮುರಿದು, ಭಯಿರ [ಭೈರಾ] ದೇಶ

[ದೇವಿಯ?] ರಾಜ್ಯವನ್ನು ಲುಟಾಯಿಸಿ ಬಂದು, ಜಿಂಬೂರಿಗೆ ಸೇರಿದ ವೀರಣ್ಣ ವಡೆಯರಿಗೆ ನಡೆದು ಬರುವಂಥಾ ಉಡುಗಣೆ ಕಿಲ್ಲೆಯನ್ನು ಹಲ್ಲಾಮಾಡಿ, ತವನಂದಿಯಲು ಕಿಲ್ಲೆಯನ್ನು ಕಟ್ಟಿಸಿ, ಘಟ್ಟದ ಕೆಳಗಣದ ಕಾರ್ಕಳದ ಭಯಿರ್ಸ [ಬೈರಾಸು] ವಡೆಯರನ್ನು ಗೆದ್ದು, ಆ ತರುವಾಯ ಸಾಳುವ ತಿಮ್ಮಣ್ಣನಿಗೆ ಗರ್ವ ಅಪಹಾರ ಮಾಡಿ, ರಾಜ್ಯಪರಿಪಾಲನೆಯನ್ನು ಮಾಡುತ್ತಾ ಸದ್ಧರ್ಮದಿಂದ ಇದ್ದು ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ೫ ಆರಭ್ಯ ಕಾಳಯುಕ್ತಿ ಸಂವತ್ಸರದ ಆಶ್ವಿಯುಜ ಶುದ್ಧ ೪ ರವರೆಗೆ ವರ್ಷ ೧೩ ತಿಂಗಳು ೫ ರವರೆಗೆ ರಾಜ್ಯಪಾಲನೆಯನ್ನು ಮಾಡಿ, ಶಿವಾಧೀನವಾದನು.

೬

ಈ ದೊಡ್ಡ ಸಂಕಣ್ಣನಾಯಕನ ತಮ್ಮ ಚಿಕ್ಕ ಸಂಕಣ್ಣನಾಯಕನು ರಾಜ್ಯಭಾರ ಮಾಡಿದ ವಿವರಃ—

ಈತನ ಅಣ್ಣನ ಮಕ್ಕಳು ಹಿರೇ ವೆಂಕಟಪತಿ ನಾಯಕ, ರಾಮನಾಯಕ ಸಹ ರಾಜ್ಯಪಾಲನೆ ಮಾಡುತ್ತಾ ಇದ್ದಲ್ಲಿ, ಈ ಚಿಕ್ಕ ಸಂಕಣ್ಣನಾಯಕನ [ಚಿಕ್ಕಪ್ಪನ] ಹೆಂಡತಿಯಲ್ಲಿ ಮಗ ಹುಟ್ಟಿದ್ದರಿಂದ ಸಿದ್ದಪ್ಪನಾಯಕಯೆಂದು ಹೆಸರಿಟ್ಟು ಪೋಷಣೆಮಾಡಿಕೊಂಡು ಇರುತ್ತಾ ಇದ್ದಲ್ಲಿ, ಸೋದೆ ಸಂಸ್ಥಾನದ ಹಿರಿಯರಸಪ್ಪನಾಯಕರ ಸಂಗಡ ವಿಜಾಪುರದ ಸಲಾಬತ್ತು ಖಾನನೆಂಬವನು ಫೌಜು ತೆಗೆದುಕೊಂಡು ಬಂದಲ್ಲಿ, ಸಲಾಬತ್ತುಖಾನನ[ನ್ನು] ಕೊಂದು, ಆ ಮೇಲೆ ಮಿಕ್ಕಂಥ ಯಾವತ್ತರನ್ನು ನಿಗ್ರಹಿಸಿ ರಾಜ್ಯಭಾರ ಮಾಡುತ್ತಾ ಇದ್ದನು. ಇತ್ತಲಾಗಿ ವಿದ್ಯಾನಗರದಿಂದ ರಾಮರಾಯರು ತುರುಕರ ಮೇಲೆ ದಂಡು ಎತ್ತಿ ಹೋಗಿ ಇರುವಲ್ಲಿ, ರಕ್ತಾಕ್ಷಿ ಸಂವತ್ಸರದ ಮಾಘ ಮಾಸದಲ್ಲು ರಾಯರ ಫವುಜಿಗೂ ತುರುಕರ ಫವುಜಿಗೂ ಯುದ್ಧವಾಗಿ, ತುರುಕರ ಫೌಜು ಪಲಾಯನವಾದಲ್ಲಿ, ಗೋಲುಕೊಂಡೆ ಕುತುಬಶಹ, ಭೈರಲ್ಲಿ ನಿಜಾಮುಶಹ ಇವರಿಬ್ಬರೂ ಯುದ್ಧಕ್ಕೆ ಬಂದು ನಿಸ್ತರಿಸಲಾರದೆ ಪಲಾಯನವಾಗಿ, ರಾಯರ ಫೌಜನ್ನು ಗೆಲ್ಲುವುದಕ್ಕೆ ಅಸಾಧ್ಯವೆಂದು ಇಬ್ಬರು ಪಾದಶಹಾರು ಕೂಡಿ ಮಂತ್ರಾಲೋಚನೆಯನ್ನು ಮಾಡಿ, ಮಾಯಾ ತಂತ್ರದಿಂದ ಗೆಲುವುದು ನಿಶ್ಚಯಮಾಡಿ, ರಾಯರ ಸಮೀಪದಲ್ಲಿ ಮುಖ್ಯವಾಗಿ ಚಾಕರಿಯನ್ನು



ಮಾಡಿಕೊಂಡು ಇದ್ದ ವಿಜಾಪುರದ ದುರುಳ ಪಾದಶಹಾ ಸಂಧಾನ ಮಾಡಿ ವ್ಯಾಜ್ಯ ಹುಟ್ಟಿಸಿ, ಸ್ವಜಾತಿ ದೇವರು ಭಾಷಾ ಪಟ್ಟಾಕತ್ತಿ ಮುಟ್ಟಿಸಿ ಪ್ರಮಾಣ ಮುಂತಾದುದು ಮಾಡಿಕೊಂಡು, ಆ ದುರುಳ ಪಾದಶಹಾನ ವಶಾಮಾಡಿಕೊಂಡು, ಗೋಲುಕುಂಡೆ ಕುತುಬಶಹ, ಅಮ್ಮದಾನಗರದ ಭೈರಲ್ಲಿ ನಿಜಾಮುಪಾದಶಹ, ಇವರಿಬ್ಬರೂ ಸಹ 'ನಂಬಿಕೆಯಾದರೆ ಸಂಧಾನ ಮುಖದಿಂದ ರಾಯರ ಭೇಟಿಗೆ ಬರುತ್ತೇವೆ'— ಯೆಂಬದಾಗಿ ಸಮಾಚಾರ ಸುಳ್ಳು ಹುಟ್ಟಿಸಿ, ನಂಬಿಸಿ, ಮೈಸೂರು ಶೀಮೆಯನ್ನು ಸ್ವಾಧೀನ ಮಾಡಿಕೊಂಡು, ಆ ಬಳಿಕ ವಿಜಾಪುರದಲ್ಲು ಇರುವಾ ದುರುಳ ಪಾದಶಹಾನ ನಂಬಿಗೆಯಿಂದ ಪಾದಶಹಾರು ಒಂದು ಆಗಿ, ಮೋಸದ ಮೇಲೆ ಶಾಲೀವಾಹನ ಶಕೆ ವರ್ಷ ೧೪೮೬ ರಕ್ತಾಕ್ಷಿ ಸಂವತ್ಸರದ ಮಾಘ ಬಹುಳದಲ್ಲು.....................ಯೆಂಬ ಸ್ಥಳದಲ್ಲಿ ರಾಮರಾಯರನ್ನು ಹಿಡಿದು ಶಿರಚ್ಛೇದವನ್ನು ಮಾಡಿ. ಆ ಶಿರವನ್ನು ಕಾಶಿಗೆ ಕಳುಹಿಸಿ, ಆ ಸಂಸ್ಥಾನದ ಯಾವತ್ತು ಶೀಮೆಯನ್ನೂ ತಾವೇ ಆಕ್ರಮಿಸಿಕೊಂಡದ್ದರಿಂದ, ರಾಯರ ಸಂಸ್ಥಾನ ವಿಚ್ಛಿನ್ನವಾಗಿ, ವಿದ್ಯಾನಗರವು ಪಾಳಾಗಿ ಹೋದುದರಿಂದ, ರಾಯರ ಮನೆಪಾರ್ತೆ ಜೊಕ್ಕಸದ ಶಾನಭಾಗ ಚಿನ್ನಭಂಡಾರ ನಾರಣಪ್ಪ ಯೆಂಬಾತನು ಅಲ್ಲಿ ನಿರ್ವಾಹವಮಾಡಲಾರದೆ ಕುಟುಂಬ ಮಕ್ಕಳು ಸಹ ಕರೆದುಕೊಂಡು ಚಿಕ್ಕ ಸಂಕಣ್ಣ ನಾಯಕನ ಸಮೀಪಕ್ಕೆ ಸೇರಿದನು. [ಅವರಿಗೆ] ಅಧಿಕಾರವನ್ನು ಕೊಟ್ಟು ಸಂರಕ್ಷಣೆಯನ್ನು ಮಾಡಿದರು. ಆ ತರುವಾಯ ರಾಯಸಂಸ್ಥಾನದ ವರ್ತಮಾನ ಯಾವತ್ತೂ ಕೇಳಿ, ಅಲ್ಲಿಂದ ಫೌಜು ತೆಗೆದುಕೊಂಡು ಹೋಗಿ ಭೈರಲ್ಲಿ ದೇಶಕ್ಕೆ ತೆರಳಿ ಅಲ್ಲಿರುವಂಥ ದುಷ್ಟರ ಗರ್ವವನ್ನು ಮುರಿದು ಪುನಃ ಸಂಸ್ಥಾನಕ್ಕೆ ಬಂದು ರಾಜ್ಯಪಾಲನೆಯನ್ನು ಮಾಡಿಕೊಂಡು ಇದ್ದು ಶಾಲಿವಾಹನ ಶಕ ೧೪೮೧ ಕಾಳಯುಕ್ತಿ ಸಂವತ್ಸರದ ಆಶ್ವೀಜ ಶುದ್ಧ ೫ ಆರಭ್ಯ ಪ್ರಮೋದೂತ ಸಂವತ್ಸರದ ಕಾರ್ತೀಕ ಶುದ್ಧ ೪ ರ ವರೆಗೆ ವರ್ಷ ೧೨ ತಿಂಗಳು ೧ ವರೆಗೆ ರಾಜ್ಯವನ್ನು ಆಳಿ ಮುಕ್ತನಾದನು.

( ಟೀಪುಃ— ನಮ್ಮ ಹತ್ತರವಿದ್ದ ಪ್ರತಿಯು ಇಲ್ಲಿಗೆಯೇ ಮುಗಿಯಿತು. )

---

ಇದನ್ನು ವಿಜಾಪುರದಲ್ಲಿ
ರಾ. ಬ. ಫ. ಗು. ಹಳಕಟ್ಟಿ ಇವರು ತಮ್ಮ
«ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ»ನಲ್ಲಿ ಮುದ್ರಿಸಿದರು.
ಮತ್ತು ಅವರು ವಿಜಾಪುರದಲ್ಲಿ
ಉಪಲಿಬುರುಜದ ಹತ್ತರ ೧೬೦ (ಅ) ನೇ ಮನೆಯಲ್ಲಿ
ಪ್ರಕಟಿಸಿದರು.